೧೯೫೬

ಶ್ರೀ. ಅಮ್ಮೆಂಬಳ ಶಂಕರನಾರಾಯಣ,
ಇವರಿಗೆ.

ಸ್ನೇಹದ ಕಾಣಿಕೆ.

ಶ್ರೀ. ಗೋವಿಂದ ಪೈ

೧೩. ೪. '೫೭

ವಿದಾಯ

(ಕವನ ಸಂಗ್ರಹ)

ದಿ। ಯರ್ಮುಂಜ ರಾಮಚಂದ್ರ

೧೯೫೬

ಪ್ರಕಾಶಕರು:

ಕೆ. ಗೋವಿಂದ ಜೋಯಿಸ,

ಕಬಕ, ದ. ಕ.

ಮೊದಲನೆಯ ಮುದ್ರಣ- ೧೯೫೬.

ಬೆಲೆ ರೂ. ೧—೦—೦

ಮುದ್ರಕರು:
ಆನಂದ ಪ್ರಿಂಟಿಂಗ್ ವರ್ಕ್ಸ್,
ಕಿನ್ನಿಗೋಳಿ, ದ. ಕ.

ಪ್ರಕಾಶಕರ ಮಾತು

ನನ್ನ ಪ್ರಿಯ ಸಹೋದರನಾದ ಯರ್ಮುಂಜ ರಾಮಚಂದ್ರ, ಇವರು ಜೀವಿಸಿದ್ದಾಗಲೇ ಈ ಕವನಸಂಗ್ರಹವು ಪ್ರಕಟವಾಗುವುದರಲ್ಲಿತ್ತು. ಆದರೆ ಹಲವು ಅನನುಕೂಲತೆಗಳಿಂದಾಗಿ ಆ ಕಾರ್ಯವು ಆಗ ಸಾವಕಾಶವಾಯಿತು. ಈ ಮಧ್ಯೆ ಆಗಬಾರದ ಘಟನೆಗಳು ಆಗಿಹೋದುವು. ಅನಂತರ ನಾನಾದರೂ ಈ ಪ್ರಕಾಶನದ ಕೆಲಸವನ್ನು ಶೀಘ್ರವಾಗಿ ಮುಗಿಸಬಹುದಿತ್ತು. ಆದರೆ ಅದೂ ಇಷ್ಟೊಂದು ವಿಳಂಬವಾಗಿ ಸಾಧ್ಯವಾಯಿತಷ್ಟೆ. ಅಳಿದ ಸಹೋದರನ ಆತ್ಮಕ್ಕೆ ಈ ಪ್ರಕಟಣೆಯಿಂದ ಒಂದಿಷ್ಟಾದರೂ ತೃಪ್ತಿಯುಂಟಾದರೆ ನನ್ನ ಶ್ರಮ ಸಾರ್ಥಕವಾಗುವುದು.

ಈ ಸಂಕಲನದಲ್ಲಿ ಸಹೋದರನು ಬರೆದ ಕವನಗಳಲ್ಲಿ ಉತ್ತಮವಾಗಿ ಕಂಡವುಗಳನ್ನು ಆರಿಸಿ ಪ್ರಕಟಿಸಲಾಗಿದೆ. ಕೈಬರೆಹದ ಪ್ರತಿಯನ್ನು ನೋಡುವಾಗ ಅದರಲ್ಲಿ ಅನೇಕ ಕಡೆಗಳಲ್ಲಿ ತಿದ್ದುಪಡಿಯನ್ನು ಮಾಡುವ ಯೋಚನೆ ಸ್ವತಃ ಕವಿಗೇ ಇದ್ದಿತ್ತೆಂದು ತಿಳಿದುಬಂತು. ಆದರೆ ಆ ಕುರಿತು ಯಾವುದೇ ಸ್ಪಷ್ಟ ಸೂಚನೆ ಇಲ್ಲದಿದ್ದುದರಿಂದ ತಿದ್ದುಪಡಿಯನ್ನು ಮಾಡುವುದು ಅಸಾಧ್ಯವಾಯಿತು. ಆದುದರಿಂದ ಕವನಗಳನ್ನು ಇದ್ದಕ್ಕಿದ್ದಂತೆಯೇ ಪ್ರಕಟಿಸಲಾಗಿದೆ.

ಈ ಪುಸ್ತಕದ ಪ್ರಕಾಶಕನ ಹೆಸರು ನನ್ನದಾದರೂ ಈ ಕಾರ್ಯವು ನೆರವೇರಿದುದು ಬಹು ಮಂದಿಯ ಸಹಾಯದಿಂದ. ಶ್ರೀಮಾನ್ ಎಂ. ಗೋಪಾಲಕೃಷ್ಣ ಅಡಿಗರು ನಮ್ಮ ಕೋರಿಕೆಯಂತೆ ಕವನಗಳ ಆಯ್ಕೆಯನ್ನು ಮಾಡಿ ಕವಿಯ ಪರಿಚಯಾತ್ಮಕ ಲೇಖನವನ್ನೂ ಬರೆದುಕೊಟ್ಟಿರುವರು. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಇನ್ನೂ ಹಲವಾರು ಮಂದಿ ಗೆಳೆಯರು ನೆರವನ್ನು ನೀಡಿದ್ದಾರೆ. ಅವರೆಲ್ಲರ ಹೆಸರುಗಳನ್ನು ಇಲ್ಲಿ ಸೂಚಿಸುವುದು ಅಸಾಧ್ಯ. ಆದರೂ ಪ್ರಕಾಶನದ ಕಾರ್ಯದಲ್ಲಿ ಯೋಗ್ಯ ಸಲಹೆಗಳನ್ನಿತ್ತು ಸಹಕರಿಸಿದ ಶ್ರೀಮಾನ್ ಮುಳಿಯ, ಎಂ. ಬಿ. ಮರಕಿಣಿ, ರಾಮಶಾಸ್ತ್ರಿ ಹಾಗೂ ಅ. ಗೌ. ಕಿನ್ನಿಗೋಳಿ ಇವರ ಹೆಸರನ್ನು ಸೂಚಿಸದೆ ಇರ

ಲಾರಿ. ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕೊನೆಯದಾಗಿ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಕಿನ್ನಿಗೋಳಿಯ ಆನಂದ ಪ್ರಿಂಟಿಂಗ್ ವರ್ಕ್ಸ್‌ನವರಿಗೂ ನನ್ನ ಕೃತಜ್ಞತೆಗಳು ಸಲ್ಲಬೇಕಾಗಿವೆ.

ಕಬಕ, ಇತಿ,

ತಾ. ೩೧—೩—೧೯೫೬ **ಕೆ. ಗೋವಿಂದ ಜೋಯಿಸ.**

ಪರಿವಿಡಿ.



ದಿ। ಶ್ರೀ ಯಮುನಾಂಜ ರಾಮಚಂದ್ರ ಭಟ್ಟರು.

ಜನ್ಮ:
೯—೨—೧೯೩೪.

ಮೃತ್ಯು:
೧೧—೧—೧೯೫೫.

ಬಾಳ ಬೆಳಕು

ಬಂತು; ಬಂತೋ ಬಂತು! ಹೃದಯ ಬೆಳಗಲು ಬಂತು
ಬಾಳ ನಂದಾದೀಪ ಬಂತು!

ಹೃದಯ ಗುಡಿಯನು ತೊಳೆದು, ಬಾಳಿನಿರುಳನು ಕಳೆದು
ಎದೆಗೆ ಹೊಂಬೆಳಕು ಬಂತು!

ಜೀವನದ ಆಗಸದಿ ಕವಿದ ಮೋಡವ ಸರಿಸಿ
ಕತ್ತಲನು ಕಳೆಯ ಬಂತು!

ಒಣಬಾಳ ಬಯಲಿನಲಿ ಒಲವಿನಮೃತವ ಸುರಿಸಿ
ಹೃದಯವರಳಿಸಲು ಬಂತು!

ದುಃಖಸಾಗರವ ದಾಟಿಸಲು ಆ ರುದ್ರ ಗಂ-
ಭೀರ ಮೌನವನೊಡೆದು ಬಂತು!

ನಲಿವ ಎಳೆ ಚಿಗುರಂತೆ ಬೆಳಗಿನೆಳೆಯೆಲರಂತೆ
ನವನವೋತ್ಸಾಹ ಬಂತು!

ಹಿರಿಯಾಸೆ ಬಯಕೆಗಳ, ಬಗೆಬಗೆಯ ವಸ್ತುಗಳ
ಎಲ್ಲವನು ಮರೆಸಿ ಬಂತು!

ಆಶೆ ಬಯಕೆಗಳೆಲ್ಲ ತಾನೆತಾನಾಗಿ ತಾ
ಸರ್ವಸ್ವವಾಗಿ ಬಂತು!

ಜೀವನದ ಕಹಿಯೂಟ, ಕಹಿಯ ಅನುಭವಗಳನು
ಮರೆಸಿ ನವ ಬೆಳಕು ಬಂತು!

ಧಮನಿಗಳಲುತ್ಸಾಹ, ನರನರಕೆ ಚೇತನವ
ತುಂಬಿ ಬಾಳ್ ಬೆಳಕು ಬಂತು!

(೧೮-೩-೧೯೪೮.)

ನಸುಕಿನ ಸಂಭ್ರಮ

ಉದಯಾದ್ರಿಯ ತಿಳಿನೀಲ ಲಲಾಟವು
ನಸುಗೆಂಪೇರಿಹುದು!
ಹೊಸ ಮದುಮಗಳಿನ ಸ್ವಾಗತಕಿಳೆ ಹೊಸ
ರೂಪವ ಧರಿಸಿಹಳು

ನಿಶೆಯುಪಟಳದಲಿ ನಲವಿಲ್ಲದೆ ಕರಿ
ಸೀರೆಯನುಟ್ಟವಳು!
ಉಷೆಗೆಳತಿಯ ಆಗಮನಕೆ ಸ್ವಾಗತ-
ಕಣಿಯಾಗುತಲಿಹಳು!

ಬಾನಿನ ಕನ್ನಡಿ ನೋಡುತ ತಿರೆ ತಿಳಿ
ಬಿಳಿಯನು ಧರಿಸಿಹಳು!
ತನ್ನ ಸುಗಂಧವ ಬೀರಲು ಪವನನ
ಒಲವನು ಪಡೆದಿಹಳು!

ಬಾನಿನ ಚಪ್ಪರದೊಳಸೇರುತ ಉಷೆ
ಮೆಲ್ಲಡಿಯಿಡುತಿಹಳು!
ಇಳೆಯಾದರದ ಸ್ವಾಗತದಿಂ ಉಷೆ
ನಲವನು ಪಡೆದಿಹಳು!

ಹೊಸ ಮದುಮಗಳುಷೆ ಮೂಡಣ ಬಾನಿನ
ಮಂಟಪವೇರಿಹಳು!
ಮೂಡಣದಲಿ ಕೆಂಬಣ್ಣದ ಮಂಟಪ
ದಲಿ ಕಂಗೊಳಿಸಿಹಳು

ಅರುಣನ ಬದಿಯೊಳೆ ಉಷೆ ನಗುತಿರುವಳು;
ಸಂಭ್ರಮವೆಲ್ಲೆಲ್ಲೂ;
ತಿರಿಯೊಳು ಹಕ್ಕಿಯ ಆನಂದದ ಕೋ-
ಲಾಹಲವೆಲ್ಲೆಲ್ಲೂ!

ವಾದ್ಯವ ಮೊಳಗಿಸುತಿಹ ಶುಕ ಪಿಕಗಳ
ಇಂಚರ ಕೇಳುತಿದೆ!
ಅರುಣನ ಸ್ವಾಗತ ಕರೆಬಂದಲರಾ-
ನಂದದಿ ಬಳುಕುತಿದೆ!

ದಿನವೂ ಉಷೆ ಬಹಳಾದರು ಎನಿತೀ
ನಸುಕಿನ ಸಂಭ್ರಮವು:
ಇರುಳಿನ ಮಾಯೆಯು ಕಳೆದಿಹ ತಿರೆಗಾ-
ನಂದದ ವಿಭ್ರಮವು!

(೧೫-೯-೧೯೪೮.)

ಗುಡಿಯ "ಶಿಲೆ"ಗೆ-

ಯಾವ ಶಿಲ್ಪಿಗೇಕೆ ಕಠಿಣ ಶಿಲೆಯನು ಕಡೆದು
ನಿನ್ನ ಈ ಕಲ್ಲೆದೆಯ ನಿರ್ಮಿಸಿಹರೋ?
ಆವ ಲೋಕಕೆ ಕಾವಲಾಗಿ ನಿನ್ನನು ನಿಲಿಸಿ
ತಮ್ಮ ದುಡಿಮೆಯ ಫಲವ ಕಾಣದಿಹರೋ?

ಎನಿತು ಪೂಜೆಯನುಂಡೆ? ನೈವೇದ್ಯಗಳ ತಿಂದೆ?
ಮಂಗಳಾರತಿಯ ಸಂಭ್ರಮವ ಸವಿದೆ?
ಉಂಡು ತಿಂದುದು, ಅದರ ನೆನಪು- ಎಲ್ಲಕು ನಿನ್ನ
ಕಲ್ಲೆದೆಯ ತೋರಿ ಕಗ್ಗಲ್ಲ ನುಡಿದೆ

ನಿನ್ನನಂತ ಸಮಾಧಿಯನು ಎಂದು ತೊರೆವೆಯೊ?
ಬೆಂದೊಡಲುಗಳ ನುಡಿಯ ಪೂಜೆಯಾಯ್ತು!
ಅಲರ ಪೂಜೆಯು ಮುಗಿದು ಕಣ್ಣೀರ ಕಾಲುವೆಯು
ಹರಿಸಿ ನಿನ್ನಯ ಪಾದ ಪೂಜೆಯಾಯ್ತು!

ಎನಿತು ಯುಗಗಳು ಉರುಳಬೇಕೆನಿತು ನೆತ್ತರಿನ
ಹೊಳೆ ನಿನ್ನ ಕಾಲುಗಳ ತೊಳೆಯಬೇಕು?
ನಿನ್ನ ಕಲಾಮನದ ರುದ್ರ ಸಮಾಧಿಯಳಿಯಲ್ಕೆ
ಎನಿತು ಕಣ್ಣೀರ ಅಭಿಷೇಕಬೇಕು?

ಕಲ್ಲೊಡಲು ಇರಲಿ, ಆದರೆ ಕಲ್ಲು ಮನಬೇಡ,
ಕಲ್ಲೊಳಗೆ ಪ್ರಣಯ ಪೀಯೂಷವಿರಲಿ!
ಬೆಂದೊಡಲು ಕಣ್ಣೀರಿನೊಡನೆ ನಿನ್ನೊಡಲ ಸೋಕೆ
ಬೆರೆತು, ಜೀವನ ಹೃದಯಗಳನು ಕೊನರಿಸಲಿ!

(೯-೫-೧೯೪೮.)

ಸಮತೆ

ಅಡಗಿದನು ಪಡುಗಡಲಿನಾಳದಲಿ ಸಂಜೆರವಿ,
ಇರುಳು ಕವಿಯಿತು ಸರ್ವಕೂ ಸಮತೆಯನು ಹೊದೆಸಿ
ಹಸುರು ಬಿಳುಪುಗಳೆಲ್ಲ ಇದರೊಳಗೆ ಹುದುಗುವುವು
ಕರಿಯ ಬಿಳಿಯರು ಒಂದೆ ಹೊದಿಕೆಯೊಳಗಡಗುವರು.
ದಾನವರು ಸುರಿದ ನೆತ್ತರಿಗೆ ಕಾಣಿಕೆಯಾಗಿ
ಹೊನ್ನಗಿಂಡಿಯೊಳಮೃತವುಪ್ಪವಿಸೆ ಅದನೀಂಟಿ
—ಸುರರಾಗಿ ಜನಿಸಿದಪರಾಧಕಾಗಿಯೊ ಏನೊ—
ಅವರ ಒಡಲನು ಸೀಳಿ ಸುರರೆನಿಸಿದವರಂಥ
ಕಪಟಿಗಳು, ಪರರ ಅನ್ನವ ಕಸಿದು ಉಂಬವರು,
ದುಡಿವವರು, ಎಲ್ಲರೂ ಇಲ್ಲಿ ಒಂದಾಗಿಹರು.

ಆದರೂ ರವಿಯುದಯ ಗಿರಿಯನೇರಲು ನಾಳೆ,
ತನ್ನ ಹೊಂಬೆಳಕೆಂಬ ಕಿಚ್ಚಿನಲಿ ಮುನ್ನಿರುಳ
ಸಮತೆಯನ್ನುರಿಸಿ ತೃಣಕಣಗಳಲ್ಲಿಯು ಭೇದ
ಬೆಂಕಿಯನ್ನುರಿಸ ಬಹುದಂತಾಗದಿರಲಿ! ರವಿ
ಹೊಂಬೆಳಕಿನಲ್ಲಿ ಸರ್ವವನು ರಂಜಿಸುತಿರಲಿ
ಎಲ್ಲ ವರ್ಣಗಳನ್ನು ಹೊಂಬಣ್ಣವಾಗಿಸುತ.
ಬಿರುಬಿಸಿಲಿನಲ್ಲಿ ಸುಟ್ಟುರಿ ಸರ್ವವೂ ಸುಡಲಿ.
ಸರ್ವವೂ ಅಳುತಿರಲಿ— ಇಲ್ಲವೇ ನಗುತಿರಲಿ.

(೧೧-೬-೧೯೪೮.)

ಸುಪ್ರಭಾತ

ಸುಪ್ರಭಾತದ ದಿವ್ಯ ದರ್ಶನದಿ ಮೈಮರೆತು
ನಿಂತಿಹುವು ನಿನ್ನೆ ಮೊದಲಾದ ಮಳೆಯು;
ಹಸುರು ಮೈ ಪುಲಕಿಸಿತು ಅಚ್ಚರಿಯಿದೇನೆಂದು:
ಮೂಡಲಲಿ ಹೊಸತು ಕಳೆಯು. —೧

ಇರುಳ ಮಳೆಯಲಿ ತೊಯ್ದು ಬಾಗಿರುವ ಹೊಂದಳಿರು
ಉದುರಿಸುವ ನೀರಹನಿ ಚಿನ್ನವಾಗಿ.
ಮಿಂಚುತಿದ್ದಿತು, ಸೂರ್ಯನೆಳೆಕಿರಣ ಭೂಮಿಯಲಿ
ಶತಕೋಟಿ ತಾರೆಯಾಗಿ. —೨

ಎಲ್ಲ ಹಕ್ಕಿಗಳಿಲ್ಲಿ ಕೋಗಿಲೆಗಳಾಗಿಹವು
ಒಂದು ದನಿಗೆಲ್ಲವೂ ದನಿಯಕೂಡಿ,
ಮಧುರ ಸ್ವಪ್ನವನೆದುರು ತರುತಿಹವು, ಎದೆಗೆ ಮೃದು-
ಮಧುರ ರಸಪಾಕವೂಡಿ. —೩

ಕಲ್ಲು ದೇಹವ ಗುಡಿಯ ಕತ್ತಲಲ್ಲಿಯೆ ಬಿಟ್ಟು
ನಲಿಯುತಿವೆ ದೇವರುಗಳಾತ್ಮವಿಲ್ಲಿ;
ಮರಳಿ ಕತ್ತಲು ಹೊಗುವ ಆಸೆಯವುಗಳಿಗಿಲ್ಲ,
ಇಲ್ಲಿಹವು ಸಗ್ಗದಲ್ಲಿ. —೪

ನೋಡೊಮ್ಮೆ, ನೋಡಿದನು, ಮೌನದಲಿ, ಮೈಮರೆತು:
ಚಿಮ್ಮುತಿಹ ಚೇತನದ ಚಿಲುಮೆಯನ್ನು;
ಚೆಲುವು, ನಲವುಗಳ ಈ ದಿವ್ಯ ಸಮ್ಮೇಲನವನು;
ಈ ಸುಪ್ರಭಾತವನ್ನು. —೫

(೨೮-೬-೧೯೪೮.)

ಮಳೆಗಾಲದ ಮುಚ್ಚಂಜೆ

ಪಶ್ಚಿಮದ ಹಣೆಯು ಕಪ್ಪಿನಲಿ ಕುಂಕುಮಚೆಲ್ಲಿ
—ಮುಗುಳು ಮುಗುಳಾಗಿರುವ ಗುಲಾಬಿ ಹೂವಿನ ದಳದ
ಕೋಮಲತೆ, ಸೌಂದರ್ಯಗಳ ಒಲ್ಮೆಯಪ್ಪುಗೆಯ
ಸಮ್ಮೀಲನದಲ್ಲಿ, ಸುಂದರವಾದ ಎಳೆಗೆಂಪು
ರಂಜಿಸುವ ತೆರದಿ— ನಿರ್ಮಲವಾಗಿ ಕೆಂಪಾಗಿ

ಗಂಭೀರವಾಗಿ ನಿಶ್ಚಲವಾಗಿ ಮೌನದಲಿ
ನಿಂತಿತ್ತು. ಸೂರ್ಯನಿದ ನೋಡಿ ಧ್ಯಾನಾನಂದ
ದಲ್ಲಿ ಮೈಮರೆತು ತೆಂಕು ದಿಗಂತದೆಡೆಸಾಗಿ
ಅಲ್ಲಿ ಕದಲೊಳಗಿಳಿದು ಅಡಗಿ ನೋಡುತಲಿಹನೊ
ಎಂಬಂತೆ ತೆಂಕು ದೆಸೆಯಲಿ ಚೂರು ಚೂರಾಗಿ

ಹರಡಿರುವ ತೆಳುಮುಗಿಲ ತುಂಡುಗಳು ಕೆಂಪಾಗಿ
ಮೆಲ್ಲಮೆಲ್ಲನೆ ಸುತ್ತಿಸುಳಿದು ನಲಿದಾಡುತಿವೆ.
ಮೂಡು ಬಡಗು ದಿಗಂತದಲಿ ಮನೋಹರ ನೀಲಿ;
ಮೌನದಲಿ ಗಂಭೀರವಾಗಿ ತಲೆಯೆತ್ತಿರುವ
ತರು ಸಮೂಹಗಳಿಂದ ಆಗಾಗ ಮೌನವನು

ನೀರ ಹನಿ ಕೆಣಕುತಿದೆ ಮತ್ತೆ ಪಡುವಣ ದೆಸೆಯು
ಸಂಜೆ ಬಾನನು ಕಂಡು ಮೌನದಲಿ ಮೈಮರೆತು
ಕರಗುತಿದೆ. ಇರುಳ ಸುಂದರ ಭಯಾನಕ ಮಳೆಗೆ
ಮುಗಿಲಿನಡಿಗಟ್ಟು ಪಶ್ಚಿಮದಿಂದ ಮೂಡಲಲಿ
ಗಿರಿಯ ನೆತ್ತಿಯ ಮರದ ತುದಿಯವರೆಗೂ ಹಬ್ಬಿ

ಗಂಭೀರವಾಗಿ ಸುಂದರವಾಗಿ ಮೌನದಲಿ
ತನ್ನ ಪಶ್ಚಿಮದಂಗದಂದವನು ಮನದಣಿಯೆ
ನೋಡಿ ನಲಿಯುತಲಿತ್ತು.
ಹಕ್ಕಿಗಳು ಮಳೆಯೊಡನೆ
ತನ್ನ ಗಂಟಲ ನಾದವನು ಬೆರಸೆ ಮಳೆಗಾಗಿ

ಮೌನದಲಿ ಕಾಯುತಿದ್ದೆವು ಎಲ್ಲಿ ಕಡೆಯಲ್ಲಿ
ಘನವಾದ ಕಪ್ಪುಮೋಡದ ಸಂಜೆ ಚೆಲುವನ್ನು
ಮೌನದಲಿ ಆನಂದ ಭೀತಿಗಳ ಮಿಲನದಲಿ
ನೋಡೊಮ್ಮೆ, ನೋಡಿದನು! ಈ ರಮ್ಯ ದೃಶ್ಯವನು
ನೋಡುವುದೆ ಭಕ್ತಿ ಮೇಣ್ ಮೆಯ್ಮರೆವುದೆ ಮುಕ್ತಿ!

(೪-೭-೧೯೩೮.)

ಪ್ರಭಾತಫೇರಿ

ಇದೋ ಭರತ ಭೂಮಿಯಲ್ಲಿ ಎಳೆಯ ಹಸುರು ಚಿಗುರಿದೆ
ಮುತ್ತಿದಿರುಳ ಹಿಂದೆ ದೂಡಿ ನಸು ಬೆಳಕದೊ ಮೂಡಿದೆ.
ಬಾರೊ ಬೆಳಕ ವಂದಿಸೊ,
ಕವಿದ ಇರುಳ ನಂದಿಸೊ,
ಶಾಂತಿ – ಸತ್ಯ – ಸಖ್ಯಗಳನು ನಿನ್ನೆದೆಯೊಳು ತುಂಬಿಸೊ!

೨

ಎಷ್ಟು ಜೀವ ಭಾರತದ ಸ್ವತಂತ್ರಕಾಗಿ ಅಳಿದಿವೆ.
ಎಷ್ಟು ಜೀವ ಅದನು ರಕ್ಷಿಸಲ್ಕೆ ಬಲಿಗಳಾಗಿವೆ!
ಅವರ ಧೈರ್ಯ ಪಡೆದುಕೊ!
ಅವರ ಕಥೆಯ ಕೇಳಿಕೊ!
ಅವರ ಪಥದೆ ಮುಂದೆ ಸಾಗಿ ಭಾರತವನು ಸಲಹಿಕೊ!

೩

ಏತಕಾಗಿ ಬಾಪು ತನ್ನ ಬಾಳ್ವೆಯನ್ನು ಸವೆದನೋ,
ಏತಕಾಗಿ ಜನತೆ ತನ್ನ ರಕ್ತವನ್ನು ಹರಿಸಿತೋ,
ಅವರ ಗುರಿಯ ನೆನಪಿಡು
ಜೀವನವನು ಅಡವಿಡು
ಅವರ ಬಾಳಿನಾಳದಲ್ಲಿ ಇರುವ ಸತ್ಯ ನೆನಪಿಡು!

೪

ನಿನ್ನ ನಾಡು, ನನ್ನ ನಾಡು, ಜನರ ನಾಡು ಭಾರತ.
ಶಾಂತಿ, ಸತ್ಯ, ಸಖ್ಯಗಳಲಿ ತುಳುಕಲಿ ಈ ಭಾರತ.
ಅದೋ ನೋಡು, ಬಾನನು,
ಉರಿವ ಮೂಡು ಬಾನನು,
ಉರಿಸಿ ನಿನ್ನ ಎದೆಯ ಕೊಳೆಯ ಪಡೆಯೊ ಅಮಲ ಎದೆಯನು!

೫

ಇದೋ, ರಮ್ಯನಾಡು ಕಾಶ್ಮೀರವನ್ನು ಸ್ಮರಿಸಿಕೊ.
ಗುಂಡಿಗೆದೆಯ ಕೊಟ್ಟ ಉಸ್ಮಾನನನ್ನು ನೆನಸಿಕೊ.
ಗಂಡೆದೆಗಳ ವೀರರು,
ಧೀರ ಭಾರತೀಯರು,
ದೇಶಕಾಗಿ ಜೀವತೆತ್ತು ಮೆರೆವ ಸಮರ ಶೂರರು!

೬

ಶಾಂತಿ, ಸತ್ಯ, ಸಖ್ಯಗಳಲಿ ಓಲಾಡಲಿ ನಿನ್ನೆದೆ.
ಅದೇ ಎದೆಯು ಭಾರತಕ್ಕೆ ಮೀಸಲಿಡು ಅಳುಕದೆ.
"ಜಯ" ಎನ್ನೋ ಭಾರತ,
ಜಯ ಜಯ ಜಯ ಭಾರತ,
ಶಾಂತಿ, ಸತ್ಯ, ಸಖ್ಯಗಳ ಪ್ರತೀಕವಿದ್ದೈ, ಭಾರತ!

(೨೭-೯-೧೯೪೮.)

ಎಚ್ಚರಿಕೆ!

ಕೊನೆಯ ಮಾತಿದು! ಕೇಳು ಎನಗೆ ಹೊರಲಾರದುದ
ಹೇರದಿರು! ಬೇಡುವೆನು, ಸಾರುವೆನು! ಕೇಳದಿರೆ,
ಇದೊ, ಕೊನೆಯದಾಗಿ ಎನ್ನೆಲ್ಲ ಬಲವಂ ಪ್ರಯೋ-
ಗಿಸಿ, ಎನ್ನ ಬಲಹೀನ ಮೂಳೆಗಳ ಹಿಡಿದೆತ್ತಿ
ನೆಟ್ಟಗಾಗಿಸಿ, ಅಳಿಯಲಾದೆನ್ನ ಶಿರವನ್ನು
ಮೇಲೆತ್ತಿ, ಕಣ್ಣೀರ ಸುರಿವ ಕಂಗಳಲಿ ಕಿಡಿ
ಸುರಿಸಿ, ಗರ್ಜಿಸುವೆನಿದೊ! ಇತ್ತ ಮೊಗವನು ತಿರುಹೊ!
ಕಿವಿತೆರೆದು ಕೇಳಿದೋ! ಎಚ್ಚರಿಕೆ! ಎಚ್ಚರಿಕೆ!

ನಿನ್ನ ಕೊಬ್ಬಿದ ದೇಹಭಾರ ಸರ್ವವ ಹೊರಲು
ಎನ್ನ ಈ ಮೂಳೆಗಳಶಕ್ತ! ಅದು ಮುರಿದೀತು,
ಮುರಿದೀತು! ಜೋಕೆ! ಮುತ್ತಿನ ಬಾಳ್ವೆಯನು ಸ್ಮರಿಸು.
ಮತ್ತೆ ನಿನಗೂ ಎಲ್ಲವೊಲು ಬರಿಯ ಮೂಳೆಗಳು,
ಚರ್ಮ, ಇಷ್ಟೆ! ಹೊರಲಸಾಧ್ಯ ಭಾರವನೆನ್ನ
ಮೇಲೆ ಹೇರದಿರು! ಹಾಳಾಗದಿರು! ಎಚ್ಚರಿಕೆ!

(೮-೧೦-೧೯೪೮.)

ಸಂಜೆಯ ಬಿಸಿಲು

ಹಸುರು ಹಾಸಿಗೆಯೊಳೊರಗಿದ ಹಸುರು ಬನಗಳಿಗೆ
ಹೊದಿಸಿ ಸಂಜೆಯು ಕೆಂಪಿನುಡುಗೆಯನ್ನು,
ಚೆಲುವು ನಲಿವುಗಳೊಮ್ಮೆ ಒಂದೆಡೆಯೊಳಿರವೇನು?,
ರವಿ ಸೇರುತಿಹನು ಅಸ್ತಾದ್ರಿಯನ್ನು.

ದಣಿದ ನರವೃಂದ ತಂಪಿನ ಎಲರೊಳಲಿದಾಡಿ
ನೆಯ್ಯುವ ಸುಖಸ್ವಪ್ನ ಮಾಲೆಯಂತೆ,
ದಿನದ ಕೊನೆಯುಲ್ಲಾಸ ಕಾಲದಲಿ ರವಿಯೊಡೆಯ
ಕನಸಿನಂತಿಹವೇನು ಮುಗಿಲ ಕಂತೆ?

ಸುರಿವ ಕನಸಿನ ಕಿರಣಗಳನು ಹೀರುತಲಿಹವು
ಮೌನದಲಿ ಮೈಮರೆತು ಹಸುರ ಗುಂಪು.
ಇಂಥ ಕೋಮಲ ಬಿಸಿಲು ಮೆಯ್ಯನೊಲಿದಪ್ಪಿರಲು
ಅದಕೆ ಬೇಕಾದೀತೆ ನೆಳಲತಂಪು?

ಎದೆಯ ತುಂಬುತಲುಗುವ ಚೈತನ್ಯರಸದೊಡನೆ
ಒಂದಿಸಿತು ಆನಂದದಮೃತಬಿಂದು
ಬೆರೆತು ಸಂಜೆಯ ಬಿಸಿಲ ರೂಪದಲಿ ಸುರಿಯುತಿದೆ;
ಎಲ್ಲ ನಲಿದಿನೆ ಪುಣ್ಯದಲ್ಲಿ ಮಿಂದು!

ಏನು ಸುಂದರ ಬಿಸಿಲು! ಉರಿವ ವಿಷ ಕುಂಡದಲಿ
ಉದಿಸಿಹುದೆ ಅಮೃತದಾ ಪುಣ್ಯದೊರತೆ?
ನಂಜಿನೆದೆಗಳಲಿ ಅಮೃತದ ಹೊನಲು ಹರಿದಿರಲು
ಮಾನವ ಜಗತ್ತಿಗಿನ್ನಾವ ಕೊರತೆ?

ಪಡುವಣದ ಬಾನು ಚೇತನದುಸಿರ ಬಿಡುತಲಿದೆ;
ಹಸುರು ಸುಖಕನಸಿನಲಿ ಈಜುತಿಹುದು.
ಕನಸಲ್ಲ ಸತ್ಯವಿದು: ಸಂಜೆ, ನರಜೀವನದ
ವಿಷವ ತೊಳೆಯಲು ಅಮೃತ ಸುರಿಯುತಿಹುದು!

(೨೫-೧೦-೧೯೪೮.)

ಅರಳುತ್ತಿದೆ ಮಾನವತೆ!

ಅರಳುತ್ತಿದೆ ಮಾನವತೆ; ಪೂರ್ವ ದಿಙ್ಮಂಡಲದಿ
ರವಿನಲಿಯೆ ಒಲಿದು ನಲಿದಿರುವ ಕಂಗು,
ಇಣಿಕಿಣಿಕಿ ಬಿಸುಸುಯ್ಯುತ್ತಿರೆ, ಪಡುವಣಾದ್ರಿಯಲಿ
ರವಿಯ ತೇಜೋಹೀನ ಮೊಗವ ಕಂಡು.

೨

ಅರಳುತ್ತಿದೆ ಮಾನವತೆ; ಪೂರ್ಣ ಚಂದ್ರನ ಕಂಡು
ಆನಂದ ಸಂಭ್ರಮಗಳೊಡನೆ ಹಿಗ್ಗಿ,
ಕ್ಷೀಣ ಕಿರಣದ ಶಶಿಯ ದುಃಖದಶ್ರುವ ಕಂಡು
ಸೊರಗುತ್ತಿರೆ ಕೊರಗಿ ಸುವಿಶಾಲ ಜಲಧಿ.

೩

ಅರಳುತ್ತಿದೆ ಮಾನವತೆ; ಜಗದಕಂಬನಿ ಹೊಸಲು
ನರನ ನಗೆಗಣ್ಣಿನಿಂ ಚಿಮ್ಮುವಾಗ,
ಜಗದ ನಗೆಗಾಳಿ ಮಾನವನ ಕಂಬನಿಯೊರಸಿ
ಅವನ ಎದೆಯೊಡನೆ ಒಂದಾಗುವಾಗ.

(೧-೧೧-೧೯೪೮.)

ಸ್ವಾಗತ!

ಪಡುಗಡೆಯಲಿ ಹೊಂಬಣ್ಣದಿ ಮುಳುಗೇಳುವ ಬಾನು.
ಇನ್ನೊಂದೆಡೆ ನಿರ್ಮಲ ನೀಲಿಮ ಧರಿಸಿದ ಕಾನು.
ನಸುಬಾನಿನ ನಲೆಗೂ ಹಿಗ್ಗಿನ ಹೊಳೆ ಬಂತೇನು?
ಬನ್ನಿರಿ ಜೀವದ ಕಾಣಗಳೆ ಎದೆತೆರೆದಿಹೆ ನಾನು!

ಕಂದನ ನಗು ಕಾಣಲು ಬರುತಿರುವಳದೋ ಮಾತೆ!
ಅಳುನಗು ಬೆರಸಿದ ಮಮತಾ ಸಾಗರ ಸಂಭೂತೆ!
ಗಲಿಬಿಲಿಯೆದ್ದಿಹ ಲೋಕಕೆ ಸುಖ ಕನಸಿನ ಸಿದ್ದೆ!
ನಿನ್ನಯ ಮಮತೆಯ ಉಸಿರಿಂಗೆ ಶರಣಾಗಿದೆ ಜನತೆ!

ಬನ್ನಿರಿ ಬನ್ನಿರಿ ಹಸಿಗಳೆ, ಚೆಲುವಿನ ಮುಗುಳುಗಳೇ!
ಆಗಸದಿಂದುದುರುತಲಿಹ ಸಗ್ಗದ ಚೂರುಗಳೇ!
ಸಂತಸ ಸುಗ್ಗಿಯ ಮಕ್ಕಳೆ, ಹೊಸ ಹೊಸ ಚಿಗುರುಗಳೇ!
ಬನ್ನಿರಿ ಭೂಮಿಯ ಹೃದಯಕೆ ಮನ್ಮಥ ಬಾಣಗಳೇ!

ಮುಗಿಯಿತು ಇಂದಿಗೆ ಮುಗಿಯದ ನೀರಸ ಜೀವನವು.
ಇಂದೇ ನವದಿನದುದಯ, ನಗುನಗುತಿದೆ ಎದೆಯು.
ಅದೊ ಬೀಳುತಲಿದೆ ಹೂಮಳೆ ನಸುಬಾಗಿದ ಮರಕೆ!
ಎದೆ ತೆರೆದಿಹೆ, ಇದೊ ಸ್ವಾಗತ ಹೊಸಬಾಳಿನ ರಸಕೆ!

(೧-೪-೧೯೪೯.)

ಕೃತಜ್ಞತೆ

ಶಬ್ದವೊಂದೇ ಸಾಕು, ಎಂಥ ಹೃದಯಸ್ಪರ್ಶಿ!
   ಇನ್ನದರ ಜೀವನವದೆನಿತು ಹಿರಿದೋ!
ಸುಡುವ ಬಾಳ್ವೆಗೆ ಬಂದ ಅಮೃತಸಿಂಚನ ಕಿರಿದೆ?
   ಕಿರಿದೆನಲು ನಿನ್ನೆದೆಯು ಬರಿದು ಬರಿದೋ!

ಮನಸು ಮನಸಿನ ಕನಸು, ದಕ್ಷಿಣೋತ್ತರ ಮನಸು,
   ಬೇರೆಬೇರೆಯೆ ದೆಸೆಗೆ ಪೋಗದಿರುತಿರೆ,
ಅದಕು ಇದಕೂ ನಡುವೆ ಜೀವರಸದೊಲು ಸುರಿದ
   ಮಧ್ಯಬೆಸುಗೆಯ ಅಕ್ಷಣವನು ಮರೆವರೆ?

ಕಳೆದ ಬಾಳ್ವೆಯು ಮರೆವ ಮುಂದಿನದಕೆಡೆ ಕೊಡುವ,
   ಮರೆಸು ನೆನಪನು ಎಸುವ ಎಲೊ ಕೃತಘ್ನ!
ಹಿಂದೆ ಉಣಿಸಿದ ಪರರ ಮರೆತ ನಿನ್ನೆದೆಯನ್ನು
   ನಡುಗಿಸದೆ ಇದ್ದೀತೆ ಮುಂದೆ ಬರುವ ದಿನ?

ಶಬ್ದವೊಂದೇ ಸಾಕು, ಎನಿತು ಹೃದಯಸ್ಪರ್ಶಿ!
   ಇನ್ನದರ ಜೀವನವದೆನಿತು ಹಿರಿದು!
ಬೆಂದ ತೃಣಕಣಕೂಡ ಜೀವದಮೃತವನೆರೆದ
   ಮಳೆಯು ನೆನಪಿಗೆ ಹಸಿಯ ಧರಿಸುತಿಹುದು!

(೫-೪-೧೯೪೯.)

ನಾ ನಿಮ್ಮ ಮರೆಯಲಾರೆ

ಹೊಸ ಬೆಳಕಿನೆಡೆಗಿಟ್ಟ ಬದುಕಿನಾಧಾರಗಳೆ,
        ನಾ ನಿಮ್ಮ ಮರೆಯಲಾರೆ!
ಜನ ಸುಖಸ್ವಪ್ನಸಾಗರದಲ್ಲಿ ತೇಲಿದರು
        ನಾ ನಿಮ್ಮ ತೊರೆಯಲಾರೆ!

ನಿನ್ನೊಳೊಂದಾಗಿದ್ದ ಎನ್ನೆದುರು ಏತಕೀ
        ದೀನ ಮುಖ ಮುದ್ರೆ ತರುವೆ?
ಹೃದಯದೊಡನಾಟದೊಳಗಿದ್ದ ಲತೆಯೀ ಏಕೆ
        ಪಾದಮೂಲದಿ ಸುಳಿಯುತಿರುವೆ?

ಎತ್ತೆತ್ತ ತಿರುಗಿದರು ಕತ್ತಲೇಕಾಣಿಸಲು
        ಬೆಳಕಾಗಿ ಉರಿದಿರುವಿರಿ–
ಮರುಭೂಮಿ, ಉರಿಯುತಿದೆ, ಅಹ ತೃಷೆ! ಎಂದೊರಲೆ
        ಸೊದೆಯಾಗಿ ಸುರಿದಿರುವಿರಿ.

ನೊಂದು ಬಿಸುಸುಯ್ಯುತಿರಲೆತ್ತಿ ಮೈದಡವಿದಿರಿ
        ಮಮತೆಯಲಿ ಮಾತೆಯಾಗಿ
ಸೋತು ಹಿಂದುಳಿಯುತಿರೆ ಕೈಹಿಡಿದು ನಡೆಸಿದಿರಿ
        ಉತ್ಸಹದ ಗಾಳಿಯಾಗಿ

ಇಂದೇಕೆ ಈ ಮೌನ? ಆರಕುರಿತೀ ಧ್ಯಾನ?
        ಆರಿಗೀ ಭಕ್ತಿಯುತ ನಮನ?
ನೀರು ತುಂಬಿದ ಕಣ್ಣು ದೈನ್ಯದಲಿ ಕೇಳುತಿದೆ
        ಎಂದು ನಿಮ್ಮೀ ಋಣದ ಶಮನ?

ಬನ್ನಿ ಓ ಬಂಧುಗಳೆ, ತೊರೆದು ಹೋಗದಿರೆನ್ನ,
        ನಾ ನಿಮ್ಮ ಮರೆಯಲಾರೆ!
ಬಳ್ಳಿಬಳ್ಳಿಗಳಾಗಿ ಎನ್ನನಪ್ಪುವ ತನಕ
        ಕಂಬನಿಯನೊರಸಲಾರೆ!

(೮-೩-೧೯೩೯.)

ಆಹ್ವಾನ

ಬಂತು ಬಂತದೊ ತಾಯ ಮೊಗಕಂಡು ನೆಗೆದಾಡಿ
ನಲಿನಲಿದು ಬರುವ ಎಳೆಗರುವಿನಂತೆ.
ಬಂತು ಬಣಗಿದ ಬಾಯೊಳಾಯೆಂದು ಅಳುವ ಮಗು-
ವಿನ ಬಾಯ್ಗೆ ತಾಯ ಎದೆ ಹಾಲಿನಂತೆ!

ಹಳ್ಳ ಕೆರೆಗಳ ಮೊದಲು ಎದೆಯ ಬಾಗಿಲ ತೆರೆದು
ನರರು ತಮ್ಮೆದೆಯನ್ನೆ ತುಂಬುತಿಹರೇ?
ಬುವಿಯೊಳೊಂದಿನಿತು ನೀರಿನ ಕಣವು ಬೀಳದೊಲು
ತೆರೆದ ಕಣ್ಣಿನೊಳದನು ಹೀರುತಿಹರೇ?

ಅಲ್ಲ; ನೋಡದೊ ನೋಡು: ತೆರೆದ ಕಣ್ಣಿನ ಭಾವ,
ಜಗುಳುತಿಹ ಕಂಬನಿಯ, ದೀನಮೊಗವ.
ದಿನದಿನವು ನೋಡುವಾಗಸವ, ಕಂಬನಿಯೊಡನೆ
ಒಂದಾಗಿ ಕೂಗುತಿದೆ ದೀನ ಹೃದಯ.

ಸೇರಿತದೊ ಜಗದ ಬಡತನದ ಕಂಬನಿ ಹೊನಲು
ಸುರಿದ ಮಳೆನೀರವೊ ಪವಿತ್ರವಾಯ್ತು!
ಒಂದಾಗಿ ಹರಿಯುತಿದೆಯೇನು ಜಗದೊಡೆಯನೆಡೆ
ಅವನೆ ಸೃಷ್ಟಿಸಿದ ಲೋಕವನು ಹೊತ್ತು?

ಸಾಗುತಿದೆ ಆ ಹೊನಲು; ಸಿಡಿದ ಬಡವನ ಹೃದಯ,
ಕುಣಿವ ರುಂಡದ ತಾಳಮೇಳಗಳಲಿ.
ಸಾಗುತಿದೆ ಆ ಹೊನಲು; ಕೋಟಿ ಹೃದಯಗಳ ಅಳು,
ನೋವು, ಗೋಳುಗಳ ಹಿಮ್ಮೇಳಗಲಿ.

ನಿಲ್ಲಲೀ ಕಣ್ಣೀರು, ಸಾಕು ಈ ದೀನತೆಯು
ಸುರಿಯೊ ಮೇಘವೆ ನೀನೆ ಬೇಗ ಕರಗಿ.
ಬರಲಿ ನೆರೆ; ಬುವಿಯೊಳಿಹ ಸಿರಿಯ ಡಂಭಾಚಾರ,
ಅನ್ಯಾಯ, ಸ್ವಾರ್ಥಗಳ ಕೊಚ್ಚು, ಕೊಲೆಗೈ.

ಒಳಗೆ ಕೊಳೆತುಂಬಿ ನಾಜೀಸೊ ಬಣ್ಣದ ಬಳಿದ
ಈ ಲೋಕವನ್ನೊಮ್ಮೆ ತೊಳೆಯಬೇಕು.
ಸುರಿದ ಕಂಬನಿ ಆರಿ, ಜೀವಿಜೀವಿಯು ನಲಿದು
ನವನವೋತ್ಸಾಹವನು ಬೆಳೆಸಬೇಕು.

ಬಂತು ಬಂತದೊ ತಾಯ ಮೊಗಕಂಡು ನೆಗೆದಾಡಿ
ನಲಿನಲಿದು ಬರುವ ಎಳೆಗರುವಿನಂತೆ.
ಬಂತೆ? ಇಲ್ಲವಲ! ಬರಲೇಬೇಕು! ಈ ಲೋಕ
ಕಾಯುತಿದೆ ತಾಯಮೊಗದಾಸೆಯಂತೆ!

(೫-೬-೧೯೪೯.)

ಹದಿನೈದರ ಬೆಳಗು

ಮಳೆ ಬಂತು, ಸುದಿನದೆಚ್ಚರಿಕೆ ಕೊಡಲೋ ಏನು?
    ಅಲ್ಲ, ಮುಂದಿನ ವಿಳಯ ಸೂಚನೆಗೆ ಬಂತೋ?
ಮಳೆ ಬಂತು, ಜನಮನದ ಉರಿಯನಾರಿಸಲೇನು?
    ಅಲ್ಲ, ಸುಖಸ್ವಪ್ನಗಳನುಳಿಸಬಂತೋ?

ಎರಡು ವರ್ಷದ ಹಿಂದಿನಾವೇಶದಾ ಘೋಷ-
    ವನ್ನು ಕಿವಿದೆರೆಯ ದಾಟಿಸಲು ಬಂತೋ?
ಪೊಗೆವೆದೆಗೆ ಹರಿದು ಹೋದಾ ಸ್ವಪ್ನಮಾಲೆಯನು
    ಇಂದು ಮೂರನೆ ಬಾರಿ ನೀಡಬಂತೋ?

ಸಿಲ್ಲಲೀ ಅಬ್ಬರದ ಘೋಷ ಸಂಕೀರ್ತನೆಯು
    ಎಂದು ಥರಥರ ನಡುಗಿ ಸಿಡಿದು ಬಂತೋ?
ಈ ನರಕ ಕೂಪಕ್ಕೆ ಹೊಸಬೆಳಕದೆಂದಿಗೋ
    ಎಂದು ಮೆಲ್ಲನೆ ಕೂಗಿ ಅಳುತಬಂತೋ?

(೧೫-೮-೧೯೪೯)

ಯಾಕಣಕಿಪೆ ಈ ತೆರ?

ಯಾಕಣಕಿಪೆ ಈ ತೆರ, ಓ, ಸಂಜೆ?
ನನ್ನದುಗುಡವೇ ನಿನ್ನಾಟ?
ಓ ಬಾಂದಳವೇ ನೀನೂ ಕಲಿತೆಯ
ಕಂಬನಿಯುಗುಳುವ ಈ ಆಟ?

ಎಂದೋ ಕಟ್ಟಿದ ಎಂದೋ ನಲಿಯುವ
ಎಂತೆಂತಹುದೋ ಕನಸುಗಳು;
ಯಾವುಯಾವುದೋ ಹೊಸಹೊಸ ಹಂಬಲ
ನವೀನ ಚಲುವಿನ ಹಂದರವು:

ಎಳೆಯ ಜೀವ ಹಾರೈಸುವ ಮಂದಿರ
ಗಗನಾಂಗಣ ಅಲೆಯುವ ಕನಸು;
ಬಂದುದೆಲ್ಲವನು ತಡೆವೆನೆಂಬ ಎದೆ
ಕಂಡ ಜೀವನದ ಆ ಸೊಗಸು.

ದಿವಸಕೊಂದು, ಚಣಕೊಂದು ಆಸೆಗಳು
ಸಾವಿರ ಸಾವಿರ ಕನಸುಗಳು;
ಎಲ್ಲವು ಒಮ್ಮೆಗೆ ಅಡಗಿ ಹೋಗಿರಲು
ಅದರ ನೆನಪೊಂದೆ ಉಳಿದಿರಲು

ಒಮ್ಮೆ ಕಣ್ಣು ಆ ನೆನಪ ನೆನೆಸುವುದು,
ಒಮ್ಮೆ ಈ ಬಾಳಸೆನೆಯುವುದು.
ಮುಗಿಲು ಮುಟ್ಟಿದಾ ಶಿಖರ, ಮತ್ತೆ ಈ
ಪಾತಾಳಕೆ ಕಣ್ಣೋಡುವುದು

ಈ ಘರ್ಷಣೆಯಲಿ ಸಿಡಿದ ಹೃದಯವಿದೆ,
ನಿಸ್ಸಹಾಯ ನಾನಳುತಳುತ
ಒಂದು ತುಂಡು ಹುಲ್ಲಿಗೇ ಜೋತಿರಲು
ಏಕೆ ಅಣಕಿಸುವ ಈ ಕುಣಿತ?

ಕೆಂಬನಿಯಲಿ ನೀರಾಟವಾಡದಿರು:
ಒತ್ತಿಬರುವ ಕತ್ತಲಿಗಂಜಿ,
"ಬಂದಳಿದೋ ಉಷೆ, ನಲಿ, ಸೊಗವದು ಬಾ"
ಎಂದಣಕಿಸದಿರು ಓ ಸಂಜೆ!

ಯಾಕಣಕಿಪೆ ಈ ತೆರ ಓ ಸಂಜೆ
ನನ್ನ ದುಗುಡವೇ ನಿನ್ನಾಟ?
ನಿಲ್ಲಿಸು ವಿಸ್ತೃತ ಗಗನಕೆ ನಿನ್ನೀ
ಪಾದ ಧೂಳಿ ಹಚ್ಚುವ ಆಟ.

(೯-೯-೧೯೪೯)

ವಿಕೃತ ಲೋಕ

೧

"ನಿನ್ನ ತುಟಿ ಕೆನ್ನೆ ಹಣೆ ಬಲುಸುಂದರ ನೀನು ಚೆಲುವೆ"
ಒಮ್ಮೆ ಹಾಡಿ ಹೊಗಳುತಿಹುದು ಲೋಕ, ನಿನ್ನ ಮೆಚ್ಚುತ.
ಒಮ್ಮೆ ಅಡಗಿ ಗಾಳಿಗೋಪುರವನು ಕಟ್ಟುತಿಹುದು ತನ್ನ
ಎದೆಯ ಕೊಳೆಯ ವೇದಾಂತದ ನಟನೆಯಿಂದ ಮುಚ್ಚುತ.

೨

ನಿನ್ನ ಎದೆಯ ಸ್ನೇಹರಸದ ಧಾರೆ
ಅದರ ತಡೆಯದು.
ಹೆಜ್ಜೆಹೆಜ್ಜೆಯಲಿ ತೋರುವ
ನಿಷ್ಕಪಟತೆ, ಅರಿಯದು.
ನಿನ್ನ ಕಣ್ಣು ಮಂಜಾದರೆ
ಜನರು ಕಣ್ಣು ತೆರೆಯರು.
ನೀನೆಂದೂ ನಗಲಾರೆಯ?–
ಜನರು ನಿನ್ನ ತೊರೆವರು.

೩

ನೀನು ಅತ್ತು "ಬಾರೆ"ಂದರೆ
ಅವರೆಂದೂ ಬಾರರು;
ನೀನು ನಕ್ಕು ನಡೆಯೆಂದರು
ಓಡೋಡಿಯೆ ಬರುವರು.
ಲೋಕ ಸಮರಸದ ವಿರೋಧಿ;
ಸರಸದೆಡೆಗೆ ಒಲಿವುದು,
ನಿನ್ನ ಕೋಪ ತಾಪವನದು
ಎಂದೆಂದೂ ನೋಡದು.

೪

ಶೋಕಗೀತ ಹಾಡಿದರೂ
ಮೊದಲು ನಿನ್ನ ತುಟಿಯು ನಗಲಿ:
ಅವರಿಗದುವೆ ಮೆಚ್ಚುಗೆ!
ನೀನು ಅತ್ತು ಬೆಂಡಾದರು
ನಿನ್ನ ಕೆನ್ನೆ ಕೆಂಪಿರಲಿ:
ಅವರಿಗದುವೆ ಮೆಚ್ಚುಗೆ!
ನೀನು ಮರಣವನ್ನೆ ಕರೆ;
ಜನರಿಗದೂ ಪ್ರಣಯ ಕಲೆ!
ಆನಂದದಿ ನಲಿವರು!
ನೀನು ಪ್ರಾಣ ತೊರೆದಿರಲಿ;
ಮೈಯ್ಯು ಮಾತ್ರ ತುಂಬಿರಲಿ:
ಜನರದಕೇ ನಲಿವರು!

೫

"ನಿನ್ನ ತುಟಿ ಕೆನ್ನೆ ಹಣೆ ಬಹು ಸುಂದರ ನೀನು ಚೆಲುವೆ"
ಎಂದು ಹಾಡಿ ಹಾಡಿ ಹೊಗಳುತಿಹುದು ಮರುಳು ಲೋಕವು.
ನೀನು ತಾಯಿಯಾಗಿ ಮಮತೆಯಿಂದ "ಕಂದ ಬಾರೆ"ಂದರು
ಲೋಕ ಬಣ್ಣಿಸುವುದು "ನಿನ್ನಲಿಹುದು ಪ್ರಣಯ ನಾಕವು!"

(೨೦-೯-೧೯೪೯.)

ನಿರೀಕ್ಷೆ

ಎಳೆ ಮಂಜಿನ ಹೊದಿಕೆಯಲ್ಲಿ
    ಹಸುರಾರನೊ ಕಾದಿದೆ.
ತಾರೆಯೊಂದು ಎತ್ತೆತ್ತಲೊ
    ದಿಟ್ಟಿ ಹೊರಳಿಸುತ್ತಿದೆ.

ಮರಗಳಡಿಯ ನಸುಗತ್ತಲೆ
    ಮೂಡುದೆಸೆಗೆ ಇಣಿಕಿದೆ.
ಬಾನು, ಭೂಮಿ, ಮಂಜು ಹಸುರು
    ಎಲ್ಲ ಮೌನವಾಗಿದೆ.

ಮರಗಳಡಿಯ ನಸುಗತ್ತಲೆ,
    ಮಂಜು, ಬಾಗಿದೀ ಲತೆ
ಮೌನವಾಗಿ, ರಮ್ಯವಾಗಿ
    ಆರನು ಜಾನಿಸುತ್ತಿದೆ?

ಭೂಮಿತಾಯ ಮಡಿಲಿನಿಂದ
    ನೀಲಬಾನ ಮಡಿಲಿಗೆ
ತಂಗಾಳಿಯ ತುಂಬಿಕೊಂಡು
    ಮಂಜು ತೊಟ್ಟಿಲೊರಗಿದೆ.

ಒಮ್ಮೆ ನೀನೆ ಬರಲಾರೆಯ
    ದೇವ? ತಾಯ ತೊಟ್ಟಿಲ
ತುಂಬಿಕೊಂಡು ನಗಲಾರೆಯ
    ನನ್ನ ಎದೆಯ ತುಂಬುತ?

(೨೦-೯-೧೯೪೯.)

ನೀನು ಮುಟ್ಟಿದುದೆಲ್ಲ......

ನೀನು ಮುಟ್ಟಿದುದೆಲ್ಲ ಚಿನ್ನವೆಂದೆನಲಾರೆ.
ನೀನೊಪ್ಪಿದುದನೆಲ್ಲ ಒಪ್ಪಲಾರೆ.
ನೀನು ಮಾಡಿದುದೆಲ್ಲ ಅಮರವೆಂದೆನಲಾರೆ
ತಾಯ ಪ್ರತಿಬಿಂಬ ಮಗುವೆನ್ನಲಾರೆ.

ನಿನ್ನೆದೆಯು ಬಾನ ವೈಶಾಲ್ಯವನು ಮೀರುತಿದೆ
ಕೆಳಗೆ ನಿಂತಿದೆ ಭಾವಶಿಖರಮಾಲೆ.
ಎಲ್ಲೆಲ್ಲು ಮಂಜು, ಕಂಬನಿಯ ಬಿಸಿಯೂ ಸಾಕು
ಕರಗಿ ಬರೆಯುವೆ ನೀನು ದುಃಖದೋಲೆ.

ಭಕ್ತಿಯಲಿ ಮಲ್ಲಿಗೆಗೆ ನೀರನೆರೆವಾಗೊಮ್ಮೆ
ಒಂದು ಹೂ ಕೆಳಗುರುಳಿ ಬೀಳಬಹುದು.
ಮಮತೆಯಲಿ ಹತ್ತು ಮಕ್ಕಳಿಗನ್ನವುಣಿಸುತಿರೆ
ಒಬ್ಬನಿಗೆ ತುಸು ಕಡಮೆಯೆನಿಸಬಹುದು.

ಇದಕೆ ನಿನ್ನನು ದೂರಲೇಕೆ? ಸಾವಿರ ಮೊಗ್ಗು
ಲೋಕದಲಿ ನಿನ್ನಮಲ ಭಾವಗಳನು
ಅರಳಿ ಪಸರಿಸವೇನು? ನಿನ್ನ ಮಕ್ಕಳು ನಕ್ಕು
ಕರೆದಾಗ ಓಡೋಡಿ ಬಾರವೇನು?

ನೀನು ಮುಟ್ಟಿದುದೆಲ್ಲ ಚಿನ್ನವೆಂದನಲಾರೆ
ಕಲ್ಲೆಂದು ಎಂದೆಂದು ಹೇಳಲಾರೆ
ಆದರಿದೊ ಕೈಯ ಮುಗಿಯುವೆ– ನೀನು ಮುಟ್ಟಿರುವೆ
ಎಲ್ಲ ಹೊನ್ನಾಗಿಸುವ ಆಸೆಯಿಂದೆ

(೧೬-೧೦-೧೯೪೯)

ಮಸಣದ ಹೂಗಳು

೧

ಮುಗುಳು ಮುಗುಳು ತುಟಿಯ ತೆರೆದು
ಕಿರುನಗುವನು ಸೂಸಿ ನಲಿದು
ನಸು ಬೆಳಕಿನೊಳತ್ತ— ಇತ್ತ
    ತಲೆಯನೊಲೆವ ಹೂಗಳೇ
“ಬಂತು ಬಂತು ಅಮೃತಕುಂಭ”
ಎಂದು ದೂರದಾ ದಿಗಂತ—
ದರುಣವರ್ಣ ಕಂಡು ಹಿಗ್ಗಿ
    ಕುಣಿಯುತಿರುವ ಎಳೆಯರೇ,

ಏನ ಕೇಳುತ್ತಿರುವಿರಿ?
ಚರಣದೆಡೆಗೆ ಬಾಗಿ ತುಂಬುದಿಟ್ಟಿಯಿಂದ ಮೇಲೆ ನೋಡಿ
ತನುಬಗ್ಗಿಸಿ, ಮನ ಹಿಗ್ಗಿಸಿ ಏನ ಕೇಳುತ್ತಿರುವಿರೀ
ಏನ ಬಯಸುತಿರುವಿರಿ?
ನಿಮ್ಮ ಸಣ್ಣ ಜನ್ಮದುದಯಕಣ್ಣನ ನುಡಿ ಹರಕೆಯೋ?
ಎದೆಯೆ ನುಡಿಗಳಾಗಿ ಬಂದ ಈ ವಚನದೆ ನಡೆವಿರೇ?
ಅಂದರಿದೋ ಕೇಳಿರಿ:—
ಎಂದೆಂದೂ ಉರಿಯುತ್ತಿರುವ ಹೃದಯದ ಈ ನುಡಿಗಳೆಲ್ಲ
ಕಪ್ಪುಕೆಂಪು ಹೊಗೆಯಂತೆಯೆ ನಿಮ್ಮ ದಿಕ್ಕುಗೆಡಿಸಬಹುದು!
ಆದರೂ,
ತುಂಬು ಮನವು ನುಡಿದ ಮಾತು ಎಂದೆಂದಿಗು ಒಳಿತಿಗಾಗಿ,
ಎಂಬುದನ್ನು ಎದೆಯಲಿಟ್ಟುಕೊಂಡೆ ನುಡಿಯನಾಲಿಸಿ.

“ಅಮೃತ ಕುಂಭವಲ್ಲವದು,
    ಅಗ್ನಿಕುಂಡವು!
ನಿಮ್ಮೆದೆಗಳ ಸುಡಲುಬರುವ
    ವಿಷದ ಪಿಂಡವು!”

೨

ನೀವೆಳಸಿದ ತೆರದಿ ಎಲ್ಲ ಅಲ್ಲ ಹುಲ್ಲು ಹಾಸಿಗೆ,
ನೀನು ಕೂಡ, ನಿಲ್ಲಲಾರೆ, ಓ, ಕೆಂಡ ಸಂಪಿಗೆ!
ಈ ಲೋಕದ ಕರ್ಕಶತೆಯ ಬಿರುಗಾಳಿಯ ಘೋಷಕೆ,
ಕ್ರೂರತನವೆ ರೂಪುಗೊಂಡು ಬರುವ ಕಾಲಪಾಶಕೆ,
ಮಾನವತೆಯ ಕೊಚ್ಚಿಮೊರಿವ ಭೀಕರತೆಯ ಮೊರೆತಕೆ,
ಜೀವಜೀವ ಬೆಂದು ಹೋಗುವಂಥ ಅಗ್ನಿಪಾತಕೆ,
ಮೃದು, ಕೋಮಲ, ಸೌಂದರ್ಯದ ಮುಗ್ಧತನವನೆಣಿಸದೆ
ಎಲ್ಲೆಲ್ಲೂ ತನ್ನ ಕಾಲನೂರುತಿರುವ ಕಾಲಕೆ,

ನರತೆಯಮೃತವನ್ನು ತರಲು
ಹೊರಟ ಮಾಪವಿತ್ರರು,
ನಿಸ್ಸಹಾಯರೆದೆಯಳಲಿಗೆ
"ಓ" ಎನ್ನುತ ಬಂದವರು,
ಶಾಂತಿ, ಸತ್ಯ, ಸಖ್ಯಗಳನು
ಹಾರಯಿಸುತ ನಿಂದವರು,
ರಕುತಮಡುವಿಗೆದುರು ನಿಂತು
ಹೋರಾಡುವೆವೆಂದವರು,

ಎಲ್ಲರೆಲ್ಲರೆಲ್ಲರೂ,
ಕೊನೆಗೆ
ಮಾನವತೆಯ ದೇವರೂ
ಎಲ್ಲಿರುವರು? ಎಲ್ಲಿರುವರು? ಬಲ್ಲಿರೇನು ಮುಗ್ಧರೇ?
ಸಣ್ಣಪುಟ್ಟ ಬಂಧುಗಳೆ,
ಯಾವ ನಂದನದಲಿ ನಿಮ್ಮ ಮನವು ವಿಹರಿಸುತ್ತಿದೆ?

ಒಮ್ಮೆ ಎಲ್ಲ ಬೀಳಲಿದೆ, ಪಾತಾಳವ ಕಾಣಲಿದೆ.
ಸ್ವರ್ಗದೆಡೆಗೆ ಹಾರುತಿರುವ ನಿಮ್ಮ ಕಣ್ಣಕಾಂತಿಯು!
ಒಮ್ಮೆ ಎಲ್ಲ ಕದಡಲಿದೆ, ಎಲ್ಲೆಲ್ಲೋ ಸಿಡಿಯಲಿದೆ,
ಮಂಜು ತೊಟ್ಟಿಲಿನೊಳೊರಗಿದ ನಿಷ್ಕಲ್ಮಷ ಕಾಂತಿಯು!

ಗಾಳಿಯೊಡನೆ ಗಾಳಿಯಾಗಿ, ಬಾನು ತುಂಬ ಅಲೆವ ನಿಮ್ಮ
ತುಂಬು ಹೃದಯ ಮುದುಡಿ ಮುದುಡಿ ಬಾಡಿಹೋಗಲಿರುವುದು.
ಅಮೃತವೆಂದು ಹಿಗ್ಗುತಿರುವ ನಿಮ್ಮ ಮನಸು ವಿಷ ನದಿಯಲಿ
ಮುಳುಗಿ ಮುಳುಗಿ ನಿಸ್ಸಹಾಯವಾಗಿ ಕೂಗಲಿರುವುದು.
ಪುಟ್ಟಪುಟ್ಟ ಹಸುಳೆಗಳಿರ,

ನೋಡಿ, ನೋಡಿ ಆ ದಿಗಂತದಲ್ಲಿ ನೆತ್ತರು!
ಹಾಳಾಗುತ, ಹೋಳಾಗುತ,
ದೆಸೆದೆಸೆಯಲಿ ಸಿಡಿದುಹೋದ,
ಮಾನವತೆಯ ಹೃದಯದಿಂದ ಚಿಮ್ಮಿನೆಗೆದ ನೆತ್ತರು!

ಯಾವ ಸೊಗವ ಹಾರಯಿಸುತ
ಕಾದು ತೂಗಿ ಬಾಗುವಿರಿ?
ಯಾವ ಅಮೃತಕಾಗಿ ಮೂಡು
ದೆಸೆಗೆ ದಿಟ್ಟಿಹರಿಸಿರುವಿರಿ?
"ಅಮೃತ ಕುಂಭವಲ್ಲವದು, ಅಗ್ನಿಕುಂಡವು!
ನಿಮ್ಮೆದೆಯನು ಸುಡಲು ಬರುವ ವಿಷದ ಪಿಂಡವು!"

೩

ಏನೆ ಪುಟ್ಟ ಮಲ್ಲಿಗೆ,
ಏಕೆ ಬಂತು ಈ ಕಂಬನಿ ನಿನ್ನ ಮೃದು ಕಪೋಲಕೆ?
ಯಾರು ಉಣ್ಣಲಿಲ್ಲವೆಂದೆ ನಿಮ್ಮ ಗಂಧಪಾತ್ರವ?
ಯಾರಿಗೂ ಅರ್ಪಿಸಿಲ್ಲವೆಂದೆ ನಿಮ್ಮ ಹರಣವ?

ಬೇಡ ಬೇಡ ಬಂಧುಗಳಿರ,
ಮೃದು, ಕೋಮಲ ಹೃದಯಗಳಿರ,
ಬಿಟ್ಟುಬಿಡಿರಿ, ಬಿಡಿರಿ, ಆ ರಸದ ಕಾಲಕಲ್ಪನೆಯ!
ನಿಮ್ಮೊಂದಿಗೆ ಸರಸವಾಡಿ ನಕ್ಕುನಲಿವ ಜೀವಗಳು
ಇಂದಿಲ್ಲವು ಸತ್ಯವು!
ಇಂದಿಲ್ಲವು ಎಳೆಯರೆಂದು ಕೈಯನೀಡಿ ಅಪ್ಪಿಕೊಳುವ
ಸ್ನೇಹಪೂರ್ಣ ಹೃದಯವು!
ಎಲ್ಲೆಲ್ಲೂ ಒಂದೆ ರೀತಿ, ಒಂದೆ ಕಥೆ, ಒಂದೆ ಘೋಷ.
ಶಕ್ತಿಗೇ ಮಹತ್ವವು!
ನಿಮ್ಮ ಗಂಧದೌತಣವನು ಉಂಡ ನೆನಪಿಗಾಗಿ, ನಿಮ್ಮ
ಕತ್ತು ಮುರಿವ ತತ್ವವು!
ಇಂಥ ಕಾಲಪುರುಷನಿಗೆ,
ರಾಕ್ಷಸತೆಯ ಈ ಬೆಂಕಿಗೆ,
ತುಂಬು ಮನವು ತಿಳಿಹೃದಯದ ನಿಮ್ಮೆಲ್ಲರ ಅರ್ಪಣೆಯನೆ,
ಎಂತು ಎಂತು ಸಹಿಸಲಿ?
ವಿಷ ಸಮುದ್ರದೊಳು ಕರಗುವ ಈ ಅಮೃತದ ಬಿಂದುಗಳನು
ಅಗ್ನಿಕುಂಡವೊಳು ಬೀಳುವ ಎಳೆಹಸುರಿನ ಚಿಗುರುಗಳನು
ಎಂತು ಎಂತು ನೋಡಲಿ?

೪

ಬನ್ನಿಬನ್ನಿ, ನೀಲಬಾನಿನಾ ವಿಶಾಲ ಹೃದಯರೇ,
ಬನ್ನಿ ಹರಿವ ತಿಳಿನೀರಿನ ತೊರೆಯಂಥ ಸ್ವತಂತ್ರರೇ,
ತಿಳಿಬೆಳಕಿನೊಳಾಡುತಿರುವ ಮಂಜಿನಂಥ ಮುಗ್ಧರೇ,
ಬನ್ನಿ, ಬನ್ನಿ, ಮಹಾಪವಿತ್ರರೇ, ನಿಷ್ಕಳಂಕರೇ,
ನಿಮ್ಮ ಜೀವಗಳನು ನುಂಗಿ, ಇನ್ನೂ ಪ್ರಜ್ವಲಿಸದಿರಲಿ,
ನರತೆ ಬೆಂದ ಬೆಂಕಿಯು!

ತಾಯ ನೆಲದ ವಿಶಾಲತೆಯೊಳೊಂದು ಮಣ್ಣುಕಣವಾದರೆ
ನಿಮ್ಮಾತ್ಮಕೆ ಶಾಂತಿಯು!

ಬಳಲುತಿರುವ ಶಿಶುಹೃದಯವು ತಾಯಮಡಿಲೊಳೊರಗುವಂತೆ
ಮಹಾಸಾಗರದಲಿ ಒಂದು ಹನಿಯು ಲೀನವಾಗುವಂತೆ,
ಮಾನವತೆಯ ಘೋಷಣೆಯಲಿ ನಿಮ್ಮಾತ್ಮವು ಸೇರಲಿ!
ಕೋಟಿಕೋಟಿ ಅಬಲರೊಡನೆ ನಾವೂ ಒಬ್ಬರಿನ್ನಿರಿ!

ಆಹ, ಎಂಥ ರಮ್ಯವಿದು ತಾಯನೆಲದ ಗಂಧವು!
ಯಾವ ದೇವದೇವನೆದೆಗೆ ಕಡಮೆ ಇದರ ಅಂದವು?
ಎಂಥ ಪುಣ್ಯವಂತೆಯಮ್ಮ ನೀನು ಭೂಮಿತಾಯಿಯೆ?
ಇಂಥ ಪುಟ್ಟ ಮೃದು ಹೃದಯರ ಸೊಗಕೆ ಜನ್ಮದಾಯಿಯೆ

ಬನ್ನಿ ಬನ್ನಿ ಮುಗ್ಧರೆ,
ಅದೋ, ತಾಯಿ ಕರೆಯುತಿಹಳು ತನ್ನ ಮಡಿಲೊಳಡಗಿಸೆ,
ಕೊಲಲು ಬರುವ ದುಷ್ಟಾತ್ಮರ ಪೀಡೆಯಿಂದ ರಕ್ಷಿಸೆ!
ಏಕೆ ತಡವು? ತ್ವರೆ ಮಾಡಿರಿ, ಬನ್ನಿರಿ ಮಣ್ಣಾಗಲಿ!
ಮಣ್ಣಾಗಲಿ, ಮಣ್ಣುಕೂಡ ಹೊನ್ನಿನಂತೆ ಬೆಳಗಲಿ!

ಬನ್ನಿ, ಬನ್ನಿ, ಅಗೋ ಅಲ್ಲಿ ಅಗ್ನಿಮೇಘ ಏರುತಿದೆ,
ಎಲ್ಲೆಲ್ಲೂ ಒಂದೆಕ್ಷಣ ಅಗ್ನಿಧಾರೆ ಸುರಿಯಲಿದೆ,

ಬನ್ನಿ, ಬನ್ನಿ, ಬನ್ನಿರಿ!

ಅದೋ, ಅಲ್ಲಿ ಮೂಡಲಲ್ಲಿ, ರಕ್ತನದಿಯು ಹರಿಯುತಿದೆ,
ಮಾನವತೆಯ ಕೊಚ್ಚಿಕೊಚ್ಚಿ ಮುಂದೆ ಮುಂದೆ ಹರಿಯಲಿದೆ
"ಅಮೃತ ಕುಂಭವಲ್ಲವದು, ಅಗ್ನಿಕುಂಡವು!
ನಿಮ್ಮೆದೆಯನು ಸುಡಲು ಬರುವ ವಿಷದ ಪಿಂಡವು!"

(೧೭-೧೧-೧೯೪೯)

ಲೆಕ್ಕದ ಬುಕ್ಕು

ಇಂದು ತಾರೀಕೊಂದು, ತಿಂಗಳೇ? ಇನ್ನೊಂದು.
ವರ್ಷ ಒಂದೊಂಬತ್ತು ಐದುಸೊನ್ನೆ!
ನೂರತ್ತೊಂಬತ್ತೈದು ಎನ್ನೆಡೆಗೆ ಬರಲಿದೆಯೆ?
ಎನಗೆ ಉಳಿವುದು, ಆಹ...ಆಹ, ಸೊನ್ನೆ!

ನಿನ್ನಿನಿರುಳಿನಗದೊಂದೇ ಕೆಲಸ– ತೂಗುವುದು
(ನಿದ್ದೆಯಲ್ಲಾ–ಅಲ್ಲ.) ಖರ್ಚು–ವೆಚ್ಚ!
ಎಳೆದ ಸಿಗರೇಟ ಹೊಗೆ ಆದ ಮೋಡದ ತೆರದಿ
ಎದುರಿರುವ ಬುಕ್ಕೆಲ್ಲ ತುಂಬ ಲೆಕ್ಕ.

ಕೊನೆಗೆ ತೂಗಿದೆ—ಅಯ್ಯೊ, ಪೈಯ ಲಾಭವು ಇಲ್ಲ;
ಎಲ್ಲೆಲ್ಲು ಒಂದೆನುಡಿ—ವೆಚ್ಚವೆಚ್ಚ!
ಜೀವ ರೀತಿಯೊಳಿದನು ತುಂಬಿಕೊಳ್ಳಲಿ ಹೇಳು?
ಮಾರಲೇ ಈ ಹಳೆಯ ಲೆಕ್ಕಬುಕ್ಕ?

(೩-೧-೧೯೫೦.)

ನೀರೊಳಾಡಲೆಂದು ಬಂದೆ.....

೧

ಓ, ಸಮುದ್ರರಾಜ! ನಿನ್ನ ಹೃದಯವೆಷ್ಟು ನಿರ್ಮಲ.
ನಿನ್ನ ಮನಸೊ ಮುಟ್ಟಿದರೇ ಮುದುಡುವಷ್ಟು ಕೋಮಲ!
ನಿನ್ನ ತೆರೆಗಳಾಟದೊಡನೆ ಕೂಡಿ ಕುಣಿದು ನಲಿವೆನೆಂದೆ,
ನಿನ್ನ ಎದೆ ವಿಶಾಲವೆಂದು ಹುಡುಗಾಟದಿ ಹೊರಳಿ ಬಂದೆ;
ತುತ್ತಿಲ್ಲದ ಹತ್ತುಜನಕೆ ನೀನಾಸರೆ ಎಂಬುದರಿಯೆ,
ನಿನ್ನನಂತ ಹೃದಯದಾಳದಲ್ಲೇನಿದೆ– ಎಂಬುದರಿಯೆ;
        ಕ್ಷಮಿಸು, ಕ್ಷಮಿಸು, ಕ್ಷಮಿಸು.
ನೀರೊಳಾಡಲೆಂದು ಬಂದೆ, ಕಂಬನಿಯೊಂದರಿಯದಾದೆ
        ಕ್ಷಮಿಸು, ಕ್ಷಮಿಸು, ಕ್ಷಮಿಸು.

೨

ಆಹ, ಬೆಟ್ಟದರಸೆ! ಏನು ನಿನ್ನ ಭವ್ಯಬಾಳುವೆ!
ತೇಲಿ ಬರುವ ಮುಗಿಲಿನೊಡನೆ ಸೇರಿ ಸರಸವಾಡುವೆ!
ನಿನ್ನ ಎದೆಯ ನುಡಿಗಳನ್ನು ಒಯ್ದು ಮುಗಿಲಿಗೊರೆವೆನೆಂದೆ,
ನಿಮ್ಮ ನಡುವೆ ಗಾಳಿಯಾಗಿ ಮಗುವಿನಂತೆ ಅಲೆವೆನೆಂದೆ.
ಅಯ್ಯೊ, ಅರಿಯಲಿಲ್ಲ ನಿಮ್ಮ ಆ ವಿಚಿತ್ರ ಜೀವನವ,
ಜರಿವ ಕೈಯ ಕಾಲಪಾಶ ಮುಗಿಲಿಗೆಂಬ ಶಾಸನವ;
        ಕ್ಷಮಿಸು, ಕ್ಷಮಿಸು, ಕ್ಷಮಿಸು.
ನಿನ್ನ ಅಳಲ ನೆಳಲಿನಲ್ಲಿ ಜಗವ ಬಾಳ್ವೆ ಜಿಗಿಯಬೇಕು,
ನಿನ್ನ ಕಣ್ಣನೀರ ನೀನೆ ಕುಣಿಸಿ ಜಗವ ನಗಿಸಬೇಕು;
ಈ ಕಠೋರ ಬಾಳನಯ್ಯೊ ಅರಿಯದಾಯಿತೆನ್ನ ಬದುಕು,
ನೀರೊಳಾಡಲೆಂದು ಬಂದೆ, ಕಂಬನಿಯೊಂದರಿಯದಾದೆ,
        ಕ್ಷಮಿಸು, ಕ್ಷಮಿಸು, ಕ್ಷಮಿಸು.

೩

ಏನು ನಿನ್ನ ಕೀರ್ತಿ! ಆಹ, ಏನು ನಿನ್ನ ವೈಭವ!
ನಿನ್ನ ನಡೆಯೊ, ನಿನ್ನ ನುಡಿಯೊ, ಓ ಅದೆಷ್ಟು ಮೋಹಕ!
ನಿನ್ನ ಮುಡಿಯೊಳರಳಿನಕ್ಕು ನಲಿವ ಹೂಗಳಂದವೇನು!
ಅವುಗಳನ್ನು ನಿನ್ನ ಮಂದಹಾಸದಿಂದ ತೊಳೆವುವೇನು!
ಇದೇ ಭಾಗ್ಯಕೆಂದು ಬಂದೆ ನಾನು ನಿನ್ನ ಮಡಿಲಿಗೆ.
ಅದೇ ಮಂದಹಾಸಕೆಂದು ತುಟಿಗಳೆಡೆಗೆ ಹೊರಳಿದೆ.
ತುತ್ತಿಲ್ಲದ ನೂರುಮಂದಿ ನಿನ್ನ ಮಡಿಲೊಳೊರಗಬಹುದು,
ಎಂಬ ಒಂದೆಒಂದು ನುಡಿಯನೂ ಅಯ್ಯೋ ಅರಿಯದಾದೆ.
ಎಲ್ಲ ನಾನೆ, ನನ್ನಿಂದಲೆ ಈ ಜಗತ್ತು ಎಂದು ಬಗೆದೆ
ಕ್ಷಮಿಸು, ಕ್ಷಮಿಸು, ಕ್ಷಮಿಸು.

ಸಿಡಿವ ಹೃದಯವನ್ನು ಜಗದ ಸೌಖ್ಯಕೆಂದು ಮರೆಯಬೇಕು,
ಹತ್ತು ಜನರ ತಣಿಸಿ ನಕ್ಕು, ಕಂಬನಿಯನು ನುಂಗಬೇಕು.
ಇವ್ರೊಂದನೂ ಅರಿಯದಾದೆ, ಬರುವುದೆಲ್ಲ ನನಗೆ ಬರಲಿ.
ಹತ್ತು ಜನರ ಪಾಲಿನಲ್ಲಿ ನನ್ನದೊಂದು ದೊಡ್ಡದಿರಲಿ,
ಎಂಬ ಈ ಒಳಮನಸ್ಸಿನಾಸೆ ಬಂತು ಮುಂದಕೆ.
ಇವುಗಳಾರ್ಭಟಿಗಳಲುಳಿದೆ ನೀನೆಲ್ಲೋ ಹಿಂದಕೆ
ಆನಂದದ ಅಲೆಗಳೆಂದೆ—ಅದಿದೋ—ಸಿಡಿದ ಎದೆ.
ಮಂದಹಾಸವೆಂದೆ; ಒಳಗೊ,— ಜಗಳದಲೇಹರಿಯುತಿದೆ.
ನೀರೊಳಾಡಲೆಂದು ಬಂದೆ ಕಂಬನಿಯೆಂದರಿಯದಾದೆ,
ಕ್ಷಮಿಸು, ಕ್ಷಮಿಸು, ಕ್ಷಮಿಸು.

(೪-೧-೧೯೫೮.)

ಅಪರಾಧ

ಲೋಕಮಾತೆಯ ಮುಂದೆ ನೀಗೈದ ಅಪರಾಧ ಸಣ್ಣದಲ್ಲ.
ಜೀವನದ ಮೇಲೆ ಸಾವನ್ನೆಸೆದ ಪಾಪ ಸಾಮಾನ್ಯವಲ್ಲ.
ಮೂಡಣದ ಬಾನ ಹಣೆಯಲಿ ಬೆಳಕು ಲೇಪಿಸಿರೆ
ಈ ಜೀವದೆದೆಯು ತಳಮಳಿಸುತಿತ್ತು.
ನೆತ್ತರೇನಿದು? ಅಲ್ಲ, ನಾಚಿಗೆಯೊ? ಎಂದದರ
ಹೃದಯದುಬ್ಬರವಿಳಿತ ಕೇಳುತಿತ್ತು.
ಅತ್ತ ಇರುಳಿನ ಕಪ್ಪು ಮುಸುಕುತಿರೆ, ಈ ಮೊಗದಿ
ಹರಡಿಕೊಳುತಿಹ ಬಿಳಿಯ ಛಾಯೆಯೇನು!
ಬಿರಬಿರನೆ ತಾಯ ಸೆರಗನ್ನೆಳೆದು ಮುಖ ತುಂಬ
ಮುಚ್ಚಿಕೊಳುತಿರೆ ಕೈಯ ನಡುಕವೇನು!
ಇಂಥ ಸಮಯದೊಳೆಲ್ಲ ಲೋಕಮಾತೆಯ ಅಭಯ-
ಹಸ್ತ ಮೈಮೇಲೆಲ್ಲ ಆಡುತಿತ್ತು.
ಭಯಕೆ ಸಂಕುಚಿಸಿದ್ದ ಮುಗ್ಧತೆಯ ಮೈತುಂಬ
ನವಚೇತನದ ರಸವ ಸವರುತಿತ್ತು.
ಆಗೊಮ್ಮೆ ಈಗೊಮ್ಮೆ ಚಂದಿರನ ನಸುಬೆಳಕು
ಜಗದೆದೆಯ ಉರಿಯನ್ನು ತಣಿಸುತಿರಲು
ಎಲ್ಲೋ, ಯಾವುದೊ ಮೂಲೆಯಲ್ಲಿ ತನ್ನೆದೆಯು ಮೃದು
ಮುಗ್ಧ ಭಾವಗಳೊಡನೆ ನಲಿಯುತಿಹುದು.
ಒಮ್ಮೊಮ್ಮೆ ಆ ಜೀವಕಾನಂದ, ನಲಿವು, ನಗು,
ಒಮ್ಮೆ ದುಗುಡಗಳವನು ನೋಡಬೇಕು!
ಅವರ ಕಂಬನಿಯೊಡನೆ ಅಳಲು, ನಲಿವುಗಳೊಡನೆ
ನಲಿಯೆ ವಿಶ್ವವೆ ನಯನವಾಗಬೇಕು!
ಇಂಥ ಹೂವೊಂದನ್ನು ತಾಯ್ ಬಳ್ಳಿಯಿಂದ ನೀನೆಳೆದು ತಂದೆ
ಸರ್ವಲೋಕದ ಸಾಕ್ಷಿಯಾಗಿ ಕೆಡಿಸುತೆ ನಿನ್ನ ಬಲವ ಮೆರೆದೆ.
ಅಃ, ನಿನ್ನ ಬಲವೊ, ಮತ್ತೀ ನಿನ್ನ ವೈಭವವೊ ಸುಡುಸುಡುವದನು
ಅಂದೆ ಕಣ್ಬಿಡುತಿದ್ದ ಮನುಜತೆಯ ಕೊಂದಂಥ ಪಾಪಿ ನೀನು.

ಅಂದಿಸಿಂದಲೆ ಮೊದಲು,– ಎಂದಿಗಿದರಂತ್ಯವೋ–
ಆ ಜೀವನದ ನಿಸ್ಸಹಾಯಕತೆಗೆ.
ಅಂದಿಸಿಂದಲೆ ಮೊದಲು,– ಎಂದಿಗಿದರಂತ್ಯವೋ–
ಕೊನೆಯಿಲ್ಲದೀ ನಿನ್ನ ವಿಜಯಮದಕೆ.
ಅಂದು ಮೊದಲಾದ ಆ ಮುಗ್ಧತೆಯ ಹೊಸಬಾಳ
ಚಣಚಣವು ಕಣ್ಣೀರ ತರಿಸುತಿಹುದು.
ನಿನ್ನ ಪಶುಬಲದ ಸೆಳೆದಾಟಕ್ಕೆ ಮೈಸೋತು
ಬೀಳೆ, ಜಗದೆದೆಯೆ ತತ್ತರಿಸುತಿಹುದು.
ನೀನು ಅಳಲೆಂದೆ– ತುಟಿಕಚ್ಚಿ ಕಂಬನಿ ಮಿಡಿಯ–
ಬೇಕು; ನಗಲೆಂದೆ– ಹಲ್ಕಿರಿಯಬೇಕು.
ಕಂಬನಿಯ ಝರಿಯೆದೆಯೊಳುಕ್ಕುತಿದ್ದರು ನಿನಗೆ
ಶೃಂಗಾರ ನಾಟ್ಯವೇ ನಡೆಯಬೇಕು.
ನಿನ್ನ ವೈಭವವೇನು, ಶಕ್ತಿ ಸಾಹಸವೇನು,
ಜೀವಿಜೀವಿಯು ದೂರ ನಿಲ್ಲಬೇಕು.
ನೀಂಪು, ನೀನೇ ವಿಶ್ವವಿಜಯಿ, ನೀನೇ ಬುದ್ಧಿ–
ಜೀವಿಯೆನ್ನುತ ನಿನ್ನ ಹೊಗಳಬೇಕು.
ಇಂಥ ಸಮಯದೊಳೆಲ್ಲ ಕಣ್ಣೀರ ತೊರೆಯೊಂದು
ದುಃಖಗೀತವ ನುಡಿಸಿ ಹರಿಯುತಿಹುದು.
ಅಲ್ಲೊಂದು ಎಳೆಜೀವಿ ತನ್ನ ಕನಸಿನ ಭವ್ಯ
ಜಗದೊಡನೆ ಮುಳುಗಿ ತಳಕಾಣುತಿಹುದು.
ಆಃ, ಎಂಥ ಮೃದು ಹೃದಯದಿಂದೆದ್ದ ಕನಸುಗಳು!
ಒಂದೊಂದು ಮನವು ಒಂದೊಂದು ಲೋಕ!
ಅಲ್ಲಿ ಅರಳಿದ ತುಂಬು ಹೂ, ತಾನೆ ತಾನಾಗಿ
ಸೃಜಿಸ ಬಹುದೊಂದು ಹೊಸ ಬಗೆಯ ನಾಕ.
ಇಂಥ ನಿರ್ಮಲ ಜೀವವನು ಕೆಸರಿನೊಳಗೆ ಮುಳುಗಿಸಿದೆಯಲ್ಲ!
ಅಂದೆ ಹೂಬಿಟ್ಟ ಹಿಗ್ಗಿನೊಳಿದ್ದ ಲತೆಯನ್ನು ಕೆಡೆದೆಯಲ್ಲ!

(೬-೨-೧೯೫೦.)

ಹೃದಯಗೀತ

ಏತಕಿಂಥ ವಿಫಲತೆಯಿಂದೆನ್ನೆದೆಯು ಸುಟ್ಟಿತು?
ಏತಕಿಂಥ ನಿಸ್ಸಹಾಯಕತೆಯು ಗೂಡ ಕಟ್ಟಿತು?
ಇಂದು ಮೊದಲು ಭವ್ಯನೀಲ ನಭದ ತುಂಬ ತುಂಬಿದವನಿಗೆ,
ಈ ಕಡಲೊಳಗೆಲ್ಲೆಲ್ಲ ಮಿಂಚಿನ ಕೈ ಹರಡಿದವನಿಗೆ,
ವಿಶ್ವರೂಪವನ್ನೆ ಹೃದಯದೊಳಗೆ ತುಂಬಿಕೊಂಡವನಿಗೆ,
ಸರ್ವಲೋಕ ಕಾಲಗಳಲಿ ತಾನೆತಾನಾದ ನನಗೆ,

ಇಂದೇತಕೊ ಈ ಬಿಡುಗಡೆ ನೀರಸವೆಂದೆನಿಸಿತು
ಬಂಧನದಲಿ ಬೆಂದು ಮನ ಸ್ವನೀತವಾಗಲೆಳಸಿತು
ವಿಶ್ವದ ವಿಸ್ತಾರವ ಮರೆತೇಕಾಂತವನರಸಿದೆ.
ಎಲ್ಲೊ ಕಲ್ಲುಕೊಂಪೆಯಲ್ಲಿ ಹೃದಯವನ್ನು ಹಾಸಿದೆ.

ನಶ್ವರವಿದು ನಿರುಪಯೋಗಿ—ಎಂದು ದೇಹವನ್ನೆ ಕೊರೆದು,
ಅದರೊಂದಿಗೆ ಎದೆಯ ಭಕ್ತಿ, ಶ್ರದ್ಧೆಗಳನು ಎರೆದು, ಅರೆದು,
ಹೊಸ ಸೃಷ್ಟಿಯು ಕನಸಿಗೆ ಮಣಿಸುವ ಸೃಷ್ಟಿಕರ್ತನಾಗಿ,
ಉಷೆಯುದಯದ ಹಾಸ್ಯಸುತ ಹಾಡುತಿರುವ ಹಕ್ಕಿಯಾಗಿ,

ಎನ್ನ ಮನದ ಹಿರಿಯಾಸೆಯು ಮಂದಿರವನು ರಚಿಸಿದೆ.
ಬೆಂದು ಪ್ರಜ್ವಲಿಸಲೆಂದು ಎದೆಯನದರೊಳಿರಿಸಿದೆ.
ಆಹ, ಎಂಥ ಕಾಲದಾಟ! ದಿನದಿನಗಳು ಕಳೆದುವು
ಲಕ್ಷ ಲಕ್ಷ ಭಾವಪುಷ್ಪ ಅರಳಿ ಬಾಡಿಬಿದ್ದುವು.

ಏನೊಂದನು ಕಾಣಲಿಲ್ಲ, ಹೃದಯ ತೆರೆದು ನುಡಿಯಲಿಲ್ಲ.
ಕಣ್ಣಿದ್ದೂ ಕುರುಡನಾದೆ, ಕಿವಿಯಿದ್ದೂ ಕಿವುಡನಾದೆ.
ನಿರ್ಜಲ ನಾನೆಲ್ಲೊ ಅಂಧಕಾರದಲ್ಲಿ ಕೊಳೆಯುತಿದ್ದೆನು.
ನಿಸ್ಸತ್ವನು ನಿಸ್ಸಹಾಯನಾಗಿ ಎಲ್ಲೊ ಹೊರಳುತಿದ್ದೆನು.

ಅಯ್ಯೊ, ಹೃದಯವೆಲ್ಲೊ ಉಂಡು ಆರಿಹೋಗುತ್ತಿರುವುದು.
ಹೊಸ ಬೆಳಗೀ ನಿರ್ಜೀವಿಯನೆಲ್ಲೊ ಒಯ್ಯುತ್ತಿರುವುದು.
ಈ ವಿಫಲತೆ ಮುಗಿದೆಂದಿಗೆ ಜೀವಾನಿಲ ಸುಳಿವುದು?
ನಿಸ್ಸಹಾಯಕತೆಯ ಗೋಡೆ ಒಡೆದು ಹೃದಯ ಸುಖಿವುದು?

(೮-೮-೧೯೫೦.)

ನಿರಾಶೆಯ ಹಾಡು

ನನ್ನ ಲೋಕವೆಲ್ಲ ಸುಡುಗಾಡು–ಇಹುದೊಂದೆ ನಿರಾಶೆಯ ಹಾಡು!
ಹುಚ್ಚುಭಾವನೆಯ ಪಕ್ಕಗಳೆಲ್ಲ ಸಶಕ್ತವೆಂದು ಮನ ನಂಬಿತ್ತು
ಅವು ತಿರುಗಿದ ವಿಸ್ತಾರದಲ್ಲಿ ತನ್ನಾಳ್ವಿಕೆ ನಡೆಸಲು ಬಯಸಿತ್ತು.
ಏನು ಆಶೆಯಿದು, ವ್ಯೋಮರೂಪಿ, ಮುಟ್ಟುವೆನೇ–ಶೂನ್ಯದ ಪರಿಹಾಸ!
ಅದರಿಂದೆಂತಹ ಮಾಯೆಯು!–ಇದಕೇ ಯುಗಯುಗದಿಂದಲು
ಸೆಣಸಾಟ!
ಆಹ, ಎಂಥ ಹುಚ್ಚುಮನ! ಕನಸಿನ ಕನ್ನಡಿ ತೋರಿದ ಬಿಂಬವ ನಂಬುವರೆ?
ನಭದೊಳಲೆವ ನಿರ್ಭಯಗೂ ಕೆಳಗಿನ ಕಾಯ ಪ್ರಾಯಗಳ ತಡೆಯಿರದೆ?
ಇದೊ, ಸುಳಿಗಾಳಿ!–ಶೂನ್ಯವ ತೋರಿ ಅಡಗಿದುವೇ ಬಣಮುಗಿಲುಗಳು?
ಬೆಂದು ಕಾದು ತಪಿಸಿದ ನೆಲಕಿಲ್ಲವೆ ನೆನಹಿನ ಕಣ್ಣೀರಿನ ಹಸಿಯು?
ನನ್ನ ಲೋಕವೆಲ್ಲ ಸುಡುಗಾಡು–ಇಹುದೊಂದೆ ನಿರಾಶೆಯ ಹಾಡು.

ಯಾವ ಮೂಲೆಯಲೊ ಮುದುಡಿದ ಮನಸಿನ ಮೇಲ್ಗಡೆ ನಿಷ್ಫಲತೆಯ
ಮುಸುಕು
ಲೋಕಲೋಕದ ತಿರಸ್ಕಾರದ ಕಿಡಿನಗೆಯೊಲಿಹುದು ತಿಂಗಳ ಬೆಳಕು.
ಏನಿದು! ಏನಿದು! ಯಾರ ಮೆರವಣಿಗೆ ನಿರ್ಜೀವದ ಸುಡುಗಾಡಿನಲಿ?
ಯಾವ ಗಾನವಿದು ಮೌನದಾವರಣ? ಯಾವುದಿದೀ ಶೂನ್ಯದ ಪರಿಧಿ?
ಹಾ, ಯಾವ ಕನಸಿನವಶೇಷವನರಸುತ ಬಳಿಯ ನೆಲವ ಕೆದರುತಲಿರುವೆ?
ಯಾವ ಸ್ಮೃತಿಯ ಸೂತ್ರದಲಿ ನಿಸ್ತೇಜ ನಯನಗಳನು ಕೀಲಿಸುತಿರುವೆ?
ಈ ಪಾತಾಳದೊಳಾವ ಭವನದಪಹಾಸ್ಯಕೆ ಈ ಗುಡಿಸಲ ರಚನೆ?
ಮಾಸಿದ ಮನಸಿಗೆ ಎಲ್ಲಿಯ ಗುರಿ? ಬರಬಾರದೆ ಓ, ಕಾಲದ ಕರುಣೆ?
ನನ್ನ ಲೋಕವೆಲ್ಲ ಸುಡುಗಾಡು–ಇಹುದೊಂದೆ ನಿರಾಶೆಯ ಹಾಡು.

ಎಂದಾದರು ಬರಬಹುದೇ ಈ ಉರಿಗಾಳಿಗೆ ಮಳೆ ಹನಿಗಳ ಸ್ಪರ್ಶ?
ನಸುಕಿನ ಮುಸುಕಿಗೆ ಬೆಳಕಿನ ಬಿಡುಗಡೆ? ಮುದುಡಿದ ಬಾಳಿನೊಳುತ್ಕರ್ಷ
ಧೂಳಿನಲ್ಲಿ ಧೂಳಾಗಿಹ ಬದುಕೊಂದಾಗಿ ನುಣ್ಣನೊಗವಾಗುವುದೇ?

ಕರುಣೆಯ ಹನಿಹನಿಯುವುದೇ? ತಣ್ಣೆಲರಾಸೆಯ ಪರಿಮಳ ಬೀಸುವುದೇ?
ಓ, ಎಂದಿಗಿದರ ಕೊನೆ? ಬೆಂದ ದಿನಕೆಂದು ಸಂಜೆಯ ಮಂದಸ್ಮಿತದ ಮನೆ?
ಬಾಡುವ ಕುಸುಮದ ಎದೆಯಾಳದಿ ನವಚೈತನ್ಯದ ಬೀಜದ ರಚನೆ?
ಎಂದಿನ ತನಕವೊ ಇಲ್ಲಿ ನಿರಾಶೆಯ ವಿಸ್ತೃತ ಘನಭೀಕರ ಛಾಯೆ?
ಸುರಿವುದೆಂದೊ ಸುಸ್ನೇಹದ ಧಾರೆ? ಬಹಳೆಂದಿಗೊ ಮೂಡಣ ಮಾಯೆ?
ನನ್ನ ಲೋಕವೆಲ್ಲ ಸುಡುಗಾಡು- ಇಹುದೊಂದೆ ನಿರಾಶೆಯ ಹಾಡು.

(೩-೧೧-೧೯೩೦.)

ಎಂಥ ಕನಸೋ.....

ಎಂಥ ಕನಸೋ ಭೂಮಿ ತಾಯೇ,—ನಿನ್ನ
ಆರ ಆರೈಕೆಯೋ ತಾಯೇ—
ಗಲಿಬಿಲಿಯ ದಿನರಾಜನೆಲ್ಲೆಲ್ಲೋ ನಡೆದಿರುವ
ಅವಲೋಕದ ಕನಸನುರಿಸಲೆಂದೋ
ನಿನ್ನ ಗಲಿಬಿಲಿಯೆಂಬ ಮನವೊಂದನುಳಿಸಿರುವ
ತನ್ನ ಕರುಣೆಯ ಒಂದೆಬಂದು ಹನಿಯೆಂದೋ!
ಸುತ್ತುಮುತ್ತಲು ಕೆಸರು, ಕೊಚ್ಚೆಹಳ್ಳದ ಹಂಪ್ರ
ಎಂಥ ಬಿಡುಗಡೆಗೆ ಬಾಯ್ದೆರೆದಿರುವೆಯೋ
ನಡುವೆ ಇದು ಯಾವ ಸೌಗಂಧಿ ಕುಸುಮದ ಮುಗುಳು
ಇರುಳ ಮನದಲಿ ಬೆಳಕು ಬೆಳಗಿರುವುದೋ!
ಎಂಥ ಕನಸೋ......

ಮಲಗಿನ್ನು ಮಲಗು ನಾಳೆಯವರೆಗೆ ಸುಖನಿದ್ರೆ
ನೋಡು, ಚಂದಿರಮಾಮ ಬಂದಿರುವನು
ಮೈತುಂಬ ಮನತುಂಬ ತುಂಬ ಪ್ರೇಮದ ಮುದ್ರೆ
ಯೊತ್ತಿದೋ ಹೊದೆದುಕೊಳ್ಳಿಸುತಿರುವನು
ಮೇಲೆ ಬಾನೊಳು ತಾರೆಗಳನಂತ ಸಂಗೀತ
ಅಭಯದಾ ಗಾಳಿ ಮೈದಡವುತಿಹುದು
ಮೈಮನಗಳಿನ್ನು ತಣಿಯುವೆ? ಎಂಥದೀ ಮೊರೆತ?
ಆವ ಮಮತೆಯ ತೊರೆಯು ಹರಿಯುತಿಹುದು?
ಎಂಥ ಕನಸೋ......

ಈ ಮೊದಲು ಎಲ್ಲೆಲ್ಲು ಕಾಲೂರಿ ನಿಂತಿದ್ದ
ಬೇಗೆಗಳ ಡೇಗೆಗಳದೋ ಹಾರಿದೆ
ಅಬ್ಬರದ ಉರಿಗೆ ಮೈಬಾಗಿ ಬಸವಳಿದಿದ್ದ
ಉಸಿರಿಂದು ಉತ್ಸವಶಿಖರವೇರಿದೆ.

ಇಂಥ ಸಮಯದೊಳೇಕೊ ಈ ಮೌನದಭಿಷೇಕ?
    ಆವ ಮೂರ್ತಿಯ ಮೈಯು ಮಾಸಿರುವುದು?
ಮುಚ್ಚಿರುವ ರೆಪ್ಪೆಗಳದೇಕೆ ಬಿಚ್ಚವೊ? ಆವ
    ಕನಸಿನಾಳ್ಕೆಯಲಿ ಮುಳುಗಿರುವುದು?
        ಎಂಥ ಕನಸೋ......
ಬೆಸೆಕ ಭೈರವಲೀಲೆಯಲ್ಲಿ ಹಣ್ಣಾಗಿರುವೆ
    ಇನ್ನೆಂಥ ನಲ್ ಬೆಳಕಿನೀ ಪಾಲನೆ?
ಬೆಂದ ಮನಗಳ ಕರೆಸಿಕೊಂಬ ಆಶ್ರಯವಿಹುದೆ?
    ಅದನೆ ಬೆಳೆಸಲು ನಿನ್ನ ಈ ಲಾಲನೆ?
ಹಾಡಮ್ಮ ಹಾಡು, ಶಾಂತಿಯ ಗೀತವನೆ ಸ್ಮರಿಸು;
    ನೈಸ್ಗೊಂಡೆ ಬರದೆ ನಿನ್ನೀ ಜೋಗುಳ?
ಮನಮನದ ಕೆಸರೆಲ್ಲ ತೊಳೆದು ಪಾವನವಾಗಿ
    ಥಳಥಳಿಸದೇ ನಿನ್ನ ಮೈಯ್ಯಂಗಳ?
        ಎಂಥ ಕನಸೋ......

(೧೯-೩-೧೯೬೧.)

ಕನಸು

ಇಂದೆಲ್ಲವು ಬೆಂಗಾಡು, ಬತ್ತಿತು ನವರಸ ಪ್ರವಾಹ
ಮನದ ಬನದಿ ಕಾಳ್ಗಿಚ್ಚಿನಾಕ್ರೋಶ ಅಹಾ, ದಾಹ
ಮುಗಿಲಿನೊಳೇರಿದ ಕೈಗೆಂದಿಳಿವೆಯೊ ಗಗನದ ಗಂಗೆ
ಬತ್ತಿದ ಜೀವದ ಬತ್ತಿಯು ಸಂಗಕೆ ಸ್ನೇಹ ತರಂಗೆ
ಕಣ್ಣೀರಿನ ಕಡಲಿನ ಮೃದು ಅಂಚಿಗೆ ಹರ್ಷಸ್ಪರ್ಶ
ಶೂನ್ಯ ಸಮಸ್ಯಾಮಗ್ನನನಾಘಟಿಸುವ ಸಂಘರ್ಷ
ಚಾಚಿದ ಹಸ್ತವೆ ರಾಜರಸ್ತೆ ಇಳಿ ಬಾ, ಬಾ ಕನಸೇ
ಕಣ್ಣೀರಿನ ಹನಿಹನಿ ಮಣಿಮಾಲೆಯ ಹೆಣೆದಿಡು ಮನಸೇ
ನೋಟದ ಪಟ ಕುಣಿಕುಣಿಯುವ ಹುಸಿನಗು, ಸುಮಧುರ ಹಾಸ
ಮಮತೆಯ ಮಡಿಲೊಳಗಿಂದ ಗಾಳಿಗುದ್ದಾಡುವ ಸರಸ
ಚಾಚಿದೆ ದಿಗಂತದಾಚೆಯ ಕೊನೆಗೂ ಈ ಮೃದು ಬಂಧ
ಗಗನದ ಸೆರಗಿನೊಳಡಗಿದವನ ಸೆಳೆಯುವ ಮಕರಂದ
ಸಂಜೆಯ ಮುಗಿಲಿನ ಅಂಚಿನ ಮಿಂಚಿನೊಳಾಶೆಯ ರಕ್ಷೆ
ಮನಸಿನ ಮೃಷ್ಟಾನ್ನದ ಎದುರಿದು ನೋಟದ ಓರಿಭಿಕ್ಷೆ!
ಕರಗಲಿ ಕರಗಲಿ ದಿಗಂತದೊಡಲಲಿ ಬೆಳಕಿನ ಗರ್ವ
ಗೆಲುವಿನ ಸೋಲಿನ ನೆತ್ತರು ಮೆತ್ತಿದ ಕಠೋರ ಪರ್ವ

೨

ಹೃದಯವ ಕುಲುಕಿ, ಬೆಳಕನು ಕಲಕಿ, ಅಂಧಕಾರ
ಬಾರಾ, ದಿನದಿನ ನುಡಿಯುವ ಹಾಡಿನ ಅಂಧಕಾರ
ಹಸಿಬಿಸಿ ಪಿಸುನುಡಿ ಪಸಿದು ಕನಸಿನ ನಾಲೆಯ ರೀತಿ
ಎಂತಹ ನದುಕನ್ನೊ ಹನಿಹನಿಯುತ್ತಿರೆ ಗರಿಕೆಯ ಮೇಲೆ
ಮರೆಯಲಿ ನಿಂದಿಣುಕುವ ಕೆಂದಳಿರೇ, ಬಿಳಿಯುಸಿರೇನು?
ಕಾತರವೇನು? ಚಂದ್ರಮುಖಿಸ್ಮ್ಯ ಬಂದಿಲ್ಲೇನು?

ಸುಳಿಸುಳಿದೆಲರು ಸುಡಿಸುತಲಿರಲು—ಅಡಗಿತದೇನೊ!
ಸರಸರ ಸಪ್ಪಳ, ತೂಗುವ ಮುಗುಳೇ, ಕಿರುಚಿಗುರೇನೊ!

ಸುತ್ತಲು ಬಾಗಿ ಕೆಂಪನೆ ಬೀಗಿ ನಾಚಿಗೆಯೇನೊ!
ನೆಲವನೆ ನಂಬಿ ನಸುನಗೆ ತುಂಬಿ ಯೋಚನೆಯೇನೊ!

ಸೋಲಿನ ಪಸಿಮುಳಿ, ಜಗಕೆ ಜೀವಕಳೆ—ಪ್ರಕೃತಿಗೆ ಮಣಿತ
ಬಾನಿನ ಕರೆಯನು ಅರಸುವುದೇನು ಕಣ್ಣಿನ ಕುಣಿತ?

ಈ ಚೆಲ್ಲಾಟದ ಚಂಚಲ ನೋಟದ ಮಧುಮಾಯೆಯಲಿ,
ಇರುಳಿನ ರಂಗದ ಸಂಗೀತದ ನೀರವ ಛಾಯೆಯಲಿ,

ಶೀತಲ ಗಾಳಿ, ಕರುಣೆಯ ಕೇಲಿ, ಮೆಲ್ಲನೆ ತೇಲಿ,
ಗುಸಗುಸ ಸರಸದ ಹೊಸ ಉಲ್ಲಾಸದ ಹಾಸದ ಮೇಲೆ,

ಮನಸಿನ ಕನಸಿನ ನೋಟದ ತೋಟದ ಕಿರುಝರಿಯಾಗಿ,
ಪ್ರೀತಿಯ ಗೀತದ ತೆರೆತೆರೆಯಲಿ ಬೆಳ್ಳಿಯ ಬೆಳೆಯಾಗಿ,

ಹಬ್ಬಿತು ಹರಡಿತು ತಳಿರರಳಿತು ಭೂಮಿಯ ತುಟಿಯಂಚು
ತುಂಬಿದ ಜೀವದ ಬಂಧಿತ ಬಾಳಿಗೆ ಕಣಿವೆಯ ಮಿಂಚು.

ಇಂದೇ ಬಿಡುಗಡೆ, ನಡೆನಡೆ ಬನದೆಡೆ, ತುಂಬಿಯ ಮೊರೆತ
ತೃಪ್ತಿಯ, ಉಲ್ಲಾಸದ, ಅಶ್ವನಿಪಾತದ ಜಲಪಾತ

ಪಕ್ಕಿಯ ಚಿಲಿಪಿಲಿ, ಇರುಳಿನ ಗಲಿಬಿಲಿ, ಕೋಳಿಯ ಕೆಲೆತ
ಮೂಡಲಕನ್ನೆ ಗುಣುಗುಡುತಿಹಳೋ ಪ್ರಭಾತಗೀತ

ನಿದ್ರಿಸು ಮಗುವೇ, ಮುದ್ರಿಸು ಬಾಳಿನ ಪುಟಪುಟದಲ್ಲಿ-
ಹೊಸ ಚಿಗುರಿನ ತುಟಿಬಳ್ಳಿಯೊ, ಆಶೆಯ ಕನಸಿನ ಜಲ್ಲಿ.

(೫-೯-೧೯೫೧.)

ಬೆಳಕು

ಬಾ, ಬಾರ ಬೆಳಕೆ!
ಇಲ್ಲಿ ಕತ್ತಲಿನ ಮುತ್ತಿಗೆ, ನೆತ್ತರಿನ ಹುಚ್ಚುಹೊಳೆ
ಆಹ, ಶ್ವೇತಪತಾಕೆ!
ಭಯಕೆ ಕಪ್ಪಿಟ್ಟಿರಿಸ್ಸಿಯ ಸ್ವಲ್ಪ ಮೇಲೆತ್ತು
ಬಾ, ಬಾರ, ಬೆಳಕೆ!
ಮನಕೊಪ್ಪಿ ಎದೆಗಪ್ಪಿಮೇಲೇರಿ ಮೇಲೇರಿ
ವಿಫಲ ವಿಫಲವಿದೆಂದು ಕೊನೆಗೆ ಕೆಳಗುರುಳುತಿದೆ
ಈ ಬಳ್ಳಿ—
ಅರಳು ನಗೆಮಲ್ಲಿಗೆ
ಬಾ, ಬಾರ, ಬೆಳಕೆ.
ಇರುಳ ಬಸಿರಲಿ ಕನಸು ಮೈತೆರೆದು ನಸುನಗಲು
ಹಕ್ಕಿಗಳ ಚಿಲಿಪಿಲಿಯಲಿಸುರಾಗವುಗುತಿರಲು
ಬಂತು...ಬಂತು
ಇರುಳ ಗರ್ಭವನೊಡೆದೆ ಬಂತು.

ಮೊದಲು ಕಂಡುದು ಕಪ್ಪು
ಮತ್ತೆ ಬಿಳಿಬಿಳಿಯೆಂದು ಬೆಳ್ಳಗಾಯಿತು ಲೋಕ
        ನೀಲ ನೀರಧಿ ಕದಡಿತು
        ನೊರೆಯ ನೆರೆಯೇ ಬಂದಿತು
ಗಗನ ಮೌನವ ಕಲಕಿ ಬಂತು ಗುಡುಗು
ಮೊದಲು ಬಿದ್ದುದು ಎರಡು ಆಣೆಕಲ್ಲು
        ಮತ್ತೆ ಅಣುಬಾಂಬು–ಗುಲ್ಲು
ಹೆಜ್ಜೆಯಿಟ್ಟಲ್ಲಿ ಚಿಮ್ಮುತಿದೆ ಬೆಳಕಿನ ಚಿಲುಮೆ
        ಇದು ವಾಮನನ ಪಾದಚಿಹ್ನೆ
ಲೋಕ ಮೂರೋ? ಏಳೋ? ಎಲ್ಲವನು ನುಂಗುತಿದೆ
        ಬೆಳಕೆಂಬ ಒಂದೆ ಸೊನ್ನೆ!

ಬೆಳಕು ಬೆಳಗುವ ಚಂದ ಇರುಳು ಅರಳುವ ಚಂದ
　　　ಕನಸು ಕಟ್ಟಿರುವ ಸಂಬಂಧ!
ಈ ಸೂತ್ರದಲ್ಲಿ ನಡುಹಗಲ ಉರಿಬಿಸಿಲಿನಲಿ
ನೇತಾಡಿ 'ನೇತ್ರಿ' ಎಂದಳುವಾಗ ತೀರಿಯುತಿದೆ
ಈ ಸೂತ್ರ ಸಂಬಂಧ ಎಂಥ ಬಂಧ!
ತುಂಬಿಕೊಳು ತುಂಬಿಕೊಳು ಜ್ಞಾನನಿಧಿ ಮುಗಿಯದಿದೆ
　　　ಇದು ನಮ್ಮ ಪೂರ್ವಜನ್ಮದ ಕಥೆ

ಮನಭಾರ, ತಲೆಭಾರ ಬಲುಭಾರ
ಉಂಡು ಎಲ್ಲುಳುಹಿ ಬಂದಿಷ್ಟು ಕಣ್ಮುಚ್ಚುವೆನೊ
　　　ಇದುವೆ ಇಂದಿನ್ನ ವ್ಯಥೆ!

ಕೈಸೋಕಿದಲ್ಲೆಲ್ಲ ತೆರೆಯುತಿದೆ ಬಾಗಿಲು:
　　　ಮುಚ್ಚುವೆನು ಸಂಕೋಲೆ ಬೇಕು.
ಕಾಲಿಟ್ಟ ಕಡೆಯೆಲ್ಲ ಹುದುಗಿಹುದು ಹಾವಿನೊಲು
ಸ್ಪ್ರಿಂಗುಲಿಂಗಣ ಕುಣಿದು ಫೂತ್ಕರಿಸಿ ಉಗಿಯುತಿದೆ
ದಿಕ್ಕುದಿಕ್ಕಿಗೆ ಚೆಲ್ಲುತಿದೆ;
ಬರಸೆಳೆದು ಬಿಗಿದಪ್ಪಿ ಎಲ್ಲ ಮರೆತೇಬಿಡಲು
　　　ಅಯಸ್ಕಾಂತದಾಧಾರಬೇಕು.

ಅಯ್ಯೊ, ಮುಖ ಬಾಡಿದೆ, ಬತ್ತಿದೆ
ಅದರಿನ್ನು ಮೈಯಕಣಕಣದಿ ನವೆಯುತಿದೆ
ಬೆಳಕೆಂಬ ಬೆಂಕಿ ಹೊಗೆಯಾಡುತಿದೆ;
ನೂರು ನೂರಾರು ಅಡಿ ಅಗೆದು
ದೀಪ ಸಂದಿಸಿ ವಾಯು ಸಂಚಾರ ತಡೆದು
　　　ಏಕಾಂತದಂಧಕಾರದಲಿದನು
　　　ಹುಗಿಯಬೇಕು.

ಬಂದೆಯಾ ಬೆಳಕೆ?
ಓಹೊ ಪ್ರೇತಪತಾಕೆ?
    ಹೊಗೆಮಲ್ಲಿಗೆ?
ಬೆಳಕು ಬೆಳಕೆಂದು ರೆಪ್ಪೆಯನೆತ್ತಿ ಹಿಡಿದೆ
ಅಲ್ಲಿ ಬಿಳಿಬಿಳಿ ಬೊಂಬೆ ಮೈತೆರೆದು ಬಿದ್ದಿದೆ
ಈ ರುದ್ರ ನಾಟಕಕೆ ಮುಕ್ತಾಯವೆಲ್ಲಿಯೋ
ಕರಿಯ ತೆರೆ ಉರುಳಲಿ—ರೆಪ್ಪೆ ಮುಚ್ಚಲಿ.

(೫-೩-೧೯೫೨.)

ಚಂದ್ರಬಿಂಬ

ಆಹ, ಎಲ್ಲಿಂದ ಬಂದಿತ್ತೀ ತಂಗಾಳಿ?
ಇದಕು ನೆಲವೇ ಮನೆಯೆ?
ಇನ್ನೂ ಎರೆಹುಳದಂತೆ ಅಲ್ಲಿಯೇ ಸುಳಿಸುಳಿದು ಸುತ್ತುತ್ತಿದೆ
ಇಂದು ಕಮರಿದ ಮುಗುಳ ಮನವ ಸೇವರಿಸುತಿದೆ
ನಾಳೆ ಚಿಗುರಲಿ ಎಂದು ಬೀಜಗಳ ತಟ್ಟಿ ಮೈಮುಟ್ಟಿ ಎಬ್ಬಿಸುತಲಿದೆ
ಕತ್ತಲಿನ ಬಸುರಿಂದ ಮೇಲಿದ್ದ ಮರಗಳಿವು
ಎಂಥ ಹೆಮ್ಮೆಯೊ ಇವಕೆ
ಆಕಾಶದಿಂದಲೇ ಇಳಿದವರೊ ಎಂಬಂತೆ!
ಅಲ್ಲೊಮ್ಮೆ ಇಲ್ಲೊಮ್ಮೆ ಮಿಂಚುಗಣ್ಣನು ತೆರೆದು
ಯಾರ ಚೆನ್ನಟ್ಟುತಿವೆ ತಾರೆಗಳು?

ಇದು ರಾತ್ರಿ,
ನಾಳೆಯ ಭವಿಷ್ಯವನು ತೆರೆವ ಕರಿಬಾಗಿಲು
ಕಳೆದ ಕ್ಷಣಗಳ ನೆನಪು ಮರುಕಳಿಸಿ ಬಿಕ್ಕುತಿದೆ
ಬಿಕ್ಕಿ ಮರುಕಳಿಸುತಿದೆ
ಮತ್ತೆಲ್ಲ ಮೆಲುಮೆಲನೆ ನೆಲದಲ್ಲಿ ಇಂಗುತಿದೆ
ಮೇಲೆ ನಡುಬಾನಿನಲಿ ಮೈತೆರೆದು ನಿಂತಿಹುದು
ಚಂದ್ರಬಿಂಬ
ಎಲ್ಲವೂ ಬರಿಬರಿದು, ಬೆಳ್ಳಿಯುಂಡೆಯೊಲಿಹುದು
ಒಂದು ಚಿನ್ನದ ರೇಖೆಯೂ ಮೈಯಮೇಲಿಲ್ಲ
ಒಮ್ಮೊಮ್ಮೆ ತೂಗುವಾ ತಾರೆಗಳ ಲೋಲಕವೂ ಇಂದಿಲ್ಲ,
ಅಲ್ಲಿ ಅದೊ, ಇಂದು ಕಳೆಯಿತು, ನಾಳೆ ಬರುತಲಿದೆ
ಎನ್ನುತಿದೆ ಈ ತೋರುಗಂಬ
ಆದರೂ ಎಂಥ ನಗೆಯಾಡುತಿದೆ
ನೀರಿನಾಳದಲಿ ನೀರವ ಸುಳಿಗಳೇಳುತಿವೆ
ಬಿಡುವಿಲ್ಲ, ಬಿಡುವಿಲ್ಲ

ಇಲ್ಲಿ ಮೌನವೂ ಮೌನವಾಗಿ ಮುಂಬರಿಯುತ್ತಿದೆ
ಸಾಲುಮರಗಳ ಕೆಳಗೆ ಕಪ್ಪಾಗಿ ಹೆಪ್ಪುಗಟ್ಟಿದ್ದ ಈ ಕತ್ತಲೆ
ಮೆಲ್ಲಮೆಲ್ಲನೆ ಕರಗಿ ಮೂಡಲಿಗೆ ಹರಿಯುತ್ತಿದೆ.
ನಿಶ್ಚಲವೋ? ನೀರವವೋ? ಇಲ್ಲಿ ಒಂದೂ ಇಲ್ಲ
ಒಂದೊಂದು ಕ್ಷಣದಲೂ ಏನೇನೊ ಆಗುತ್ತಿದೆ.
ಕಣ್ಮುಚ್ಚಿ ತೆರೆಯೆ ದಾಟಿಹೆವು ಸಾವಿರ ಮೈಲು.
ಅದೊ ಕೇಳು ಕೊಳಲದನಿ
ಪಡುವಲಲಿ ಮೊದಲಾಗಿ ಮೂಡಲಲಿ ಕಂತುತಿದೆ
ಇಲ್ಲಿ ಸಂಜೆಯ ಗಾಳಿ ಊದಿದೆನ್ನು
ನಾದರೂಪವು ಅಲ್ಲಿ ಬೆಳಗಿನಲಿ ಬೆಳಗಲಿದೆ.
ಏಳು, ಎದ್ದೇಳು ನೆಲವೆ!
ಈ ಪುಟ್ಟ ಮಲ್ಲಿಗೆ ಬಳ್ಳಿ
ಕತ್ತಲಲಿ ತೊಳಲಾಡಿ ಅಳಲುತಿದೆ!
ಸ್ವಲ್ಪ ಕೈಸರಿಸೊ ಹೆಮ್ಮರವೆ!
ಅಲ್ಲ, ಅದೊ,
ಮೌನದಿಂದಲೆ ಮೋಹಿತ ಮುಗುಳುನಗೆಯು ಸುಖತುಂಬ
ಸಾಗುತಿದೆ ಚಂದ್ರಬಿಂಬ.

(೬-೬-೧೯೫೪)

ಇಂದು ನನ್ನ ಸ್ವಾತಂತ್ರ್ಯದ ದಿನವು

ಇಂದು ನನ್ನ ಸ್ವಾತಂತ್ರ್ಯದ ದಿನವು
ಅಲ್ಲಿ ಇಲ್ಲಿ ಅಲೆದು ನಲಿದು
ಏನೇನನೊ ಅಗೆದು ತೆಗೆದು
ಎಲ್ಲೆಲ್ಲೂ ಕನಸು ಕಂಡು
ಹುಚ್ಚಾಗಿದೆ ಮನವು

ಅಲ್ಲಿ ಸಂಗೀತ ಅಲ್ಲಿ ಕೇಕೆ
ಫಡಫಡಪಡವೆನ್ನುತಿದೆ
ಹುಚ್ಚನೊಲು ಪತಾಕೆ

ಒಂದೆಡೆ ಚೀತ್ಕಾರ ರೋದನದ ದನಿ
ಹಳ್ಳವಾಗಿ ಹರಿಯುತಿದೆ ಹಸಿಹಸಿ
ಅಲ್ಲಿ ಜಲಧಿಘೋಷ ಸಂತೋಷ
ಅಲ್ಲಿ ಕಿಡಿ ಕಾರುತಿದೆ
ಲಾವಾರಸ ರೋಷ

ಮೂಡಣಕ್ಕೆ ಕೈಚಾಚಿದೆ
ಉದಯನೃತ್ಯಭಂಗಿ
ಕಾಲುಸೋತು ಬಿದ್ದ ಕಡೆ
ಜಾಳ್ ನೃತ್ಯಭಂಗಿ!

ಎಲ್ಲದಕೂ ತೆರೆದಿದೆ ಈ ಬಾಗಿಲು
ಗಗನದುದ್ದ ಬಿರಿದ ಕರ್ಣಪಟಲವು
ದಿಗಂತಕೂ ಚಾಚಿವೆ ಈ ಕೈಗಳು
ಬಂದುದೆಲ್ಲ ಬಾಚಿವೆ ಈ ಕೈಗಳು
ಮೊಗವ ಮುದ್ದಿಡುತ ಬಂದ ಹೂಗಳು
ಹುಯ್ಯಲಿಟ್ಟು ಉರುಳುವ ಕಂಬನಿಗಳು
ಕಚ್ಚಿಬೆರಳ್ ಕಾಣಿಸುತಿವೆ ಕ್ರಿಮಿಗಳು
ಕಿವಿಯು ಬಳಿ ಕೇಳದ ಪಿಸು ನುಡಿಗಳು

ಎಲ್ಲವನೂ ತುಂಬಿಕೊಂಡು ಬರುತಿಹೆ
ಎಲ್ಲವನೂ ಚೆಲ್ಲಿಕೊಂಡು ನಗುತಿಹೆ
ಜಗದ ಭಾರ ಹೆಗಲನೇರಿ ನಿಂತಿಹೆ
ಉರುಳಿದಾಗ ನಾನೆ ಕುಣಿದು ನಿಂತಿಹೆ
ಇಂದೇಕೋ ಕಾಲು ನೆಲದಿ ನಿಲ್ಲದು
ಬಿಳಿಯ ದಾರಿಯಲ್ಲಿ ಹಸುರು ಮೊಳೆವುದು
ಹೃದಯ ಜಲಧಿ ತುಂಬಿ ತುಂಬಿ ಬಂದು
ಮರವ, ಮರಳ, ನೊರೆಯ, ತೆರೆಯ ತಂದು
ಅತ್ತ ಇತ್ತ ಎಸೆದು ಕಸಿದುಕೊಂಡು
ಚೆಲ್ಲುತಿದೆ ನಗೆಯ ನೊರೆಯನಿಂದು
ಇಂದು ನನ್ನ ಸ್ವಾತಂತ್ರ್ಯದ ದಿನವು
ಎಂದು—ಹುಚ್ಚಾಗಿದೆ ಮನವು.

(೧೪-೮-೧೯೪೭.)

ವಿದಾಯ

ಎಂದಾದರು ನೀನು ಬಂದೆ ಬರುವೆಯೆಂದು ಕಾಯುತ್ತಿದ್ದ
ಇಂದು ನಾನೆ ಹೊರಟು ನಿಂತಿರುವೆನು
ನೀನಿದ್ದರೆ— ಇಲ್ಲದಿದ್ದರೆ—
ಇದ್ದರೆ- - - - ಹಾ, ಎಂಥ ಘೋರ
ಈ ಭಯ ಪ್ರಪಾತದಲಿ
ಕಣ್ಣೀರಿನ ಝರಿಯಾಗಿ
ದುಮುಕುತಿರುವೆನು
ನೀನು ಬಂದಿದ್ದರೆ... ಇದ್ದರೆ...
ಹಾ – ಎಂಥ ಘೋರ –
ಲಗ್ನ ಮಂಟಪದಲಿ ಕೊರಳ
ಕೊರೆಯುತಿತ್ತು ಸರ್ಪಹಾರ –
ಸೆಜ್ಜೆಮನೆಯ ಸ್ವಪ್ನಸುಖದಿ
ದಾವಾನಲ ಅಹಂಕಾರ –
ನೆನೆದು ನೆನೆದು ನೆನೆದು ನೀರಾಗುತಿರುವೆನು
ನಡುವೆ
ಮೆಲುಮೆಲ್ಲನೆ ಅರಳುತಿರುವ
ಮನದ ಹೂವ ಮುಗಿಲಿನೆಡೆಗೆ ನೀಡುತಿರುವೆನು
ಇಂದು ನಾನೆ ಹೊರಟು ನಿಂತಿರುವೆನು.

(೧೧-೯-೧೯೫೩.)

ರೋಗಾಣುಗಳು

ಸಾಲು ಸಾಲು ಸಾಲು ಸಾಲು ನೋಡು
ಅಣುಗಳ – ರೋಗಾಣುಗಳ – ಗೂಡು
ಎಲ್ಲಿ? ಎಲ್ಲಿ? — ಊಹುಂ, ಅವು
ಹಾಗೆ ಹೀಗೆ ಕಾಣಿಸಿಗವು
ನಾಯಕದ ಬೀಜಗಳು!
ರಸ್ತೆ ಮನೆ ಗದ್ದೆ ತೋಟ
ಕೆರೆ ಚರಂಡಿ ಎಲ್ಲಿಎಲ್ಲಿ
ಇದ್ದಂತೆ ಇವೆಯಲ್ಲ? –
ನಿಜ, ನಿಜ ಇವೆಯಲ್ಲ!!
ಆದರೆ
ಕನ್ನಡಿಯ ತುಂಡೊಂದನು ತೆಗೆದುಕೊ
ಅದರಲಿಷ್ಟು ಮಣ್ಣ ನೀರೊ ಸುರಿದುಕೊ
ಒಂದು ಕಣ್ಣು ಮುಚ್ಚು
ಇನ್ನೊಂದನು ಈ ಯಂತ್ರದ ಮೈಕ್ರೋಸ್ಕೋಪ –
ಬಾಯಿಗಿಡು...
ಏನೆಲ್ಲವ ನೋಡಿದೆಯೋ ಬರೆದಿಡು...
“...ಪ್ಲೇಗು, ಕಾಲರ – ಮಹಾಮಾರಿ –
ಸಿಡುಬು, ಕ್ಷಯ, ಡಿಸೆಂಟರಿ...”
ನೋಡಿದೆಯಾ ನೆಲ–ನೀರಿನ ವಿಶ್ವರೂಪವ?
ಪ್ರಕೃತಿಕೊಟ್ಟ ಶಾಪವ?
ಇನ್ನೊಂದಿದೆ ಮಹಾಶಾಪ
ಇಲ್ಲಿ ಹೃದಯವನ್ನೆ ತೆರೆದಿಟ್ಟುಕೊ
ತಿಳಿವೆಂಬ ಯಂತ್ರವ ಮುಂದಿಟ್ಟುಕೊ
ಕಂಡುದೇನು? ಏನು...?
ಓಹೋ ಮೂರ್ಛೆಬಂತೆ?
ತಲೆಗಿಷ್ಟು ತಣ್ಣೀರನು ತಟ್ಟಿಕೊ!...

ಏನೇನಿವೆ? ಎಷ್ಟೆಷ್ಟಿವೆ?
ನಗೆಯ ಕೆಳಗೆ
ಬಗೆಯ ಕೆಳಗೆ
ಖಾದಿಯೊಳಗೆ
ಕಾವಿಯೊಳಗೆ
ಮೊಸಳೆ ಕಣ್ಣೀರ ಕೆಳಗೆ
ಮನದ ನಾಡಿನಾಡಿಯಲಿ
ಯೋಚನೆಯ ಸಂಕಲೆಯಲಿ
ಭಂಡಸಾಲೆ ಮೂಲೆಯಲಿ
ನ್ಯಾಯ, ಆಡಳಿತೆಯಲಿ
ದೀಪದಡಿಯ ಕತ್ತಲೆಯಲಿ...
ನೋಡಿದೆಯಾ
ಎಷ್ಟೆಷ್ಟಿವೆ ಎಂತೆಂತಹ ರೋಗಾಣುಗಳು!
ಆ ಕಷಾಯ, ಈ ಪಥ್ಯ
ಅಷ್ಟು ಮಿಕ್ಸ್‌ಚರ್, ಇಷ್ಟು ಮಾತ್ರೆ...
ಒಂದಕೂ ಬಾಗವು ಈ ಅಣುಗಳು!
ನೆತ್ತರೊಂದೆ ಆಹಾರ...
ಕುದಿವ ರಕ್ತ ಕಡಲಾಗಿ
ಬಾನೆತ್ತರ ತೆರೆಯೇರಿ ಮೊರೆವ ದಿನ
ಕುಡಿದು ಹೊಟ್ಟೆಯುಬ್ಬರಿಸಿ ಬೀಳ್ವ ದಿನ
ತೀರಲೂಬಹುದೊ ಏನೊ
ಎಂಬಂತಿದೆ ಅವುಗಳ ಈ ದಾಹ...
ಸಾಲು ಸಾಲು ಸಾಲು ಸಾಲು
ಅಣುಗಳು...
ರೋಗಾಣುಗಳು...

(೨೯-೯-[illegible].)

ಕ್ಷೋಭೆ

ಕುದಿದು ಕುದಿದು ಆರುತಿದೆ
ಈ ಕ್ಷುಬ್ಧ ಸಾಗರ
ವಿಷವ ಕಾರಿಕಾರಿ ಬಳಲಿ
ಮೈನೀಡಿದೆ ಸಾಗರ
ಆಗ ಒಮ್ಮೆ ಈಗ ಒಮ್ಮೆ
ನೆನಪು ಮರುಕಳಿಸುತಿರೆ
ಸುಳಿಗಾಳಿಯು ಬೀಸುತಿರೆ
ಬೂದಿರಾಸಿಯೊಳಗಿನಿಂದ
ಬೆಂಕಿಯ ಕಿಡಿ ಸಿಡಿಯುತಿರೆ
ಗಗನವೇ ಸೀಳುವಂತೆ ಏಳುತಿದೆ ಕುದಿವ ತೆರೆ
ಮುಂದೆ ನೋಡೆ ಗಾಳಿಯಿಲ್ಲ
ದಂಡೆಯಿಲ್ಲ, ಬಂಡೆಯಿಲ್ಲ
ಹೊಡೆವುದೆಲ್ಲಿ? ಎಲ್ಲಿ? ಎಂದು
ಮುಗಿಲಿನೆಡೆಗೆ ಭೋಂಕನೆದ್ದು
ಮತ್ತೆ ಸೋತು ನರಳಿ ನರಳಿ
ಸುರುಳಿ ಸುರುಳಿಯಾಗಿ ಹೊರಳಿ
ತಳಕೆ ತಲೆಯ ಬಡಿಯುತಿದೆ
ಮಡಿಯುತಿದೆ...
ಒಳಗೆಲ್ಲೊ ಉಳಿದ ಕಿಡಿ
ಉಸಿರಿನ ಹೊಗೆ ಉಗುಳಿ ಉಗುಳಿ
ಮಡಿಯುತಿದೆ...
ಈ ಕ್ಷುಬ್ಧಸಾಗರ–
ಕುದಿದು ಕುದಿದು ಆರುತಿದೆ!
ರಕ್ತ ಮಾಂಸದಾಗರ–
ಆರಿ ಆರಿ ಕುಸಿಯುತಿದೆ!

(೧೪-೧೦-೧೯೫೩.)

ಕಲ್ಪನೆ

ಕಲ್ಪನೆ
ಇದು ಭೂತದ ಮನೆ!
ಮುರುಕು ಛಾವಣಿ ಕೆಳಗೆ ಮಸಿಹಿಡಿದ ಹಲಗೆ,
ನಡುವೆ ನೇತಾಡುತಿದೆ ಜೇಡನ ಬಲೆ.
ಕವಿದೃಷ್ಟಿ ಕನಸಿನಲಿ ಏನೊ ಹುಡುಕಾಡುತಿದೆ-
ಅದೊ ಅಲ್ಲಿ ಕಣ್ಮುಚ್ಚಿ ನಿಂತಿಹುದು
ಕಾಳಬೆಕ್ಕು!
ತಲೆಯ ಮೇಗಡೆ ದೀಪ!
ಯಾರು ಹಚ್ಚಿಟ್ಟರೋ ಇದನೆಂದು
ಗಾಳಿ ಬೇಸರದುಸಿರ ಸೂಸುತಿಹುದು.
ಎಲ್ಲೊ ದೂರದಿ ಗುಡುಗು ನರಳುತಿಹುದು.
ಅಬ್ಬಬ್ಬ! ಭಯದ ಬಿರುಗಾಳಿ ಶೀಳಿಡುವ ಸದ್ದು!
ಈ ಚಪಲ ಬೆಕ್ಕು
ಎಂತು ನಂಬುವುದಿದನು?...
ಅದೊ ಅದೊ!...
ಪಾದದಡಿಯಿಂದ ನೆತ್ತಿಯ ತನಕ ಸೆಳೆದಾಡಿ
ಝುಗಝುಗನೆ ಹರಿಯಿತದೊ ಕೋಲ್ಮಿಂಚು
ಖಡಖಡಲ್ ಖಡ್ ಖಡಲ್...
ಬೆಚ್ಚಿ ಚೀರಿಟ್ಟು ಕಣ್ಬಿಟ್ಟ ಕವಿ-
ಅದೇ ಮುರುಕು ಛಾವಣಿ,
ಕೆಳಗೆ ಮಸಿಹಿಡಿದ ಹಲಗೆ,
ನಡುವೆ ತೂಗಾಡುತಿಹ ಜೇಡನ ಬಲೆ...
ಹಲ್ಲಿಬೇಟೆಗೆ ಹೊರಟ ಹೆಗ್ಗಣದ ಮರಿಯೊಂದು
ನಾಡಿನೆಡೆಯಲಿ ಸ್ತಬ್ಧವಾಗಿ ನಿಂತು,
ಮಾಡಿದ ಅಕೃತ್ಯದ ಅರಿವಿಲ್ಲದೆ,
ಕೆಳಗೆ ಪಿಳಿಪಿಳಿಯೆಂದು ನೋಡುತ್ತಿದೆ!

(೧೬-೧೦-೧೯೩೨.)

ರೋಗಿಯ ಚಿಂತೆ

ನಾಳೆ ಎಂತೋ ಏನೊ....
ಸೂರ್ಯ ಮೂಡುವನೊ ಇಲ್ಲವೋ....
ಮೂಡಿದರು ನಾನದನು ಕಾಣುವೆನೊ ಇಲ್ಲವೋ....
ಅಯ್ಯೊ ಕತ್ತಲೇ ಕತ್ತಲೇ ಕತ್ತಲೇ
ದಟ್ಟೈಸಿ ದಟ್ಟೈಸಿ ಬರುತಲಿದೆ....
ಅಯ್ಯೊ ಇದೇನು!
ನಾಡಿ? ಎದೆ ಬಡಿತ? ಇಲ್ಲವೆ ಇಲ್ಲ, ಹಾ, ರಾಮ!....
..... ಹಾಂ, ಬದುಕಿಹೆನೆ?
ನಿಜ ನಿಜ!
ಅವಸರದಿ ಕೈಯ ಹಿಂಬದಿಯಲ್ಲಿ
ನಾಡಿ ಹುಡುಕಿರಬೇಕು!
ಆದರೂ....

ನಾಳೆ ಎಂತೋ ಏನೊ....
ಸೂರ್ಯ ಮೂಡುವನೊ ಇಲ್ಲವೋ....
ಎಂತು ನಂಬುವುದು ಈ ಔಷಧಿಯ?
ಇದು ತಯಾರಾದ ವಿದೇಶೀಯ ಕಂಪೆನಿಯ?
ಅಲ್ಲಿ ಸಾವಿರ ಯಂತ್ರ
ದುಡ್ಡು ಮಾಡುವ ತಂತ್ರ
ಒಂದಕೊಂದರ ಬೆರಕೆ
ಯಾವ ರೋಗದ ಔಷಧಿಯನಿದರಲೆರೆದಿಹರೋ....
ಅಯ್ಯೊ ಇದೇನು, ಇಂದೀಭಾಗದಲಿ ನೋವು?
ನೋವೆ? ಊಹೂಂ ಇಲ್ಲ, ಬರಿಭ್ರಮೆಯೆ ಇರಬಹುದೇನೊ?
ಆದರೂ ಅಯ್ಯೊ ಇದೇನು!
ತಣ್ಣಗೇ....ತಣ್ಣಗೇ....ತಣ್ಣಗೆ!
ಇದು ಗುಣವೊ? ಅವಗುಣವೊ?....

ಅಯ್ಯೊ ಇದೇನು!
ನಾಳೆ ಎಂತೋ ಏನೊ....

ಏರಾಟ ಹೋರಾಟ ಸಾಗುತ್ತಲೇ ಇತ್ತು
ಇತ್ತ ಬೆಳಗಿನ ಕೋಳಿ ಕೂಗತೊಡಗಿತ್ತು!
ಇರುಳ ಮಡಿಲಲಿ ಸೂರ್ಯ ಕ್ಷೇಮದಿಂದಲೆ ಇದ್ದ!
ಎಂದಿನೊಲು ಮೂಡಲಲೆ ಕಣ್ಣು ತೆರೆದ!
ಆ ಜೀವಕೋ ನಾಳೆ ಬೆಳಗಾಗಲೇ ಇಲ್ಲ!
ಸೂರ್ಯನಿಗು ಎಬ್ಬಿಸುವುದಾಗಲಿಲ್ಲ!
ಅಲ್ಲಿ ಇನ್ನೂ ಇರುಳು ಕಪ್ಪಾಗಿ ಮುಸುಕುತಿದೆ
ನಾಡಿ? ಎದೆ ಬಡಿತ? ಊಹುಂ, ಇಲ್ಲ ಇಲ್ಲ!

(೧೬-೧೦-೧೯೫೩.)

ಸ್ವರ್ಗದ ದಾರಿ

ಇದು ಸ್ವರ್ಗಕೆ ಹೋಗುವ ಬೀದಿ!
ಮೇಲೆಲ್ಲಾ ಬರಿ ಬೂದೀ ಬೂದಿ
ಬಲ್ಲಿಯ ಒಳಗಿಹುದೆಂಥ ಕಾದಿ?

ಇದೊ ಬರಿಯ ಕರಿ ಟಾರಿನ ರಸ್ತೆ
ಥಳ ಥಳ ಥಳ ಥಳ ಎಂಥ ನಯ!
ಸಾಲ ವಸೂಲಿಯ ವಿನಯ!
ಓ ಬಿರುಬಿಸಿಲು!
ಕಾಲಿಟ್ಟೆಯೊ, ತೆಗೆದೊಗೆಯುವುದು.
ಗಟಾರದ ಸನಿಯಕ್ಕೆ!
ಇಲಿ, ಹೆಗ್ಗಣ, ಕಸ, ಗ್ಲಾಸಿನ ಚೂರು,
ಕೊಳೆತ ಮಾಂಸ, ನಾತದ ತವರೂರು
ಭಂಗಿಯ ಬಿಡು, ಕಾಗೆಯು ಸಹ ಹೇಸುವ
ಸೃಷ್ಟಿ ಸಮೂಹಕ್ಕೆ!

ಈ ಹಾದಿ—
ಇದು ಸ್ವರ್ಗಕೆ ಹೋಗುವ ಬೀದಿ!
ಎಂಥ ನಯ!
ಕಲ್ಲಿನ ಗಾಡಿ ಮೆಲ್ಲನೆ ಚಲಿಸೆ
ಕಟ್ಟಕಟಾಕಟ.....ಎಂಥ ನಯ!
ಕಾರು, ಬಸ್ಸು ಪೊಪ್ಪೊಂಪೋಂ ಪೀಪೀ
ಕಿಣಿಂಕಿಣಿಂಕಿಣಿ ಸೈಕಲುಗಂಟೆ
ಅಯ್ಯೋ ತಂಟೆ......
ಅಲ್ಲಿ ಎಡಕೆ ತಿರುಗಿದ ಆ ಓಣಿ
ಅಲ್ಲಿದೆ ಸುಖ ಸೌಂದರ್ಯ ಖನಿ!
ಕಿಸೆಯಲಿ ರೂಪಾಯಿ ಭಂಡವಾಳ

ಇಷ್ಟರಿ ಸಾಕು
ನೀನೂ ತೋಡು!
(ತೋಡು? ಹುಂ, ಅದು ತೋಡಿನ ದಾರಿ!
ಮತ್ತೂ ಕೊಳೆತರೆ ಹಳ್ಳದ ದಾರಿ!)
ತೋಡಿದಷ್ಟು ಮುಗಿಯದು ಅಲ್ಲಿಯ ಗಣಿ
ಅದು ಚರಂಡಿ ಓಣಿ!
ಈ ಬದಿಯಲಿ ಇದೆ ಹೆಗ್ಗಣ ಬೀದಿ
ಸಿಸುರಿದ ಕಿವಿ ನೆತ್ತರ ಕಿಡಿಕಣ್ಣು
ತಲೆಯೊಳಗೆಲ್ಲಾ ಬರಿ ಮಣ್ಣು.....
ಭೂಮಂಡಲವನೆ ನುಂಗಿದ ಹೊಟ್ಟೆ
ಮಾನವ ಕೂಗು—ಅಯ್ಯೋ ಕೆಟ್ಟೆ!
ಆ ಕರಿ ಚಿಮಿಣಿ ಹೊಗೆಯುಗುಳುತಿದೆ
ಹೆಗ್ಗಣದುಸಿರು-ಮೇಲುಸಿರು!
ಗಂಟಲ ಯಂತ್ರದ ವಿಜಯದ ಕೇಕೆ
ಆಕಾಶಕು ಕಟ್ಟಿತು ಉಸಿರು!
ಇಲ್ಲೇ ಕೆಳಗೆ
ಕತ್ತಲ ರೇಖೆ
ಭೂಮಿಯ ಬಸಿರಲಿ ವಿಲವಿಲವೆನುತಿದೆ
ಅಂಕುಡೊಂಕಿನಾ ಎಲುಬಿನ ಬೀದಿ!
ಸತ್ತವರೂ ಹೋಗದ ಸಜೀವ ಬೀದಿ!
ಅಲ್ಲೂ ಇಲ್ಲೂ ಸುತ್ತಲು ಬಿದ್ದಿವೆ
ಗೊಬ್ಬರಕೂ ಆಗದ ಎಲುಬು!
ನೃತ್ಯ-ಗಾನವೆಲ್ಲ ನಿಟ್ಟುಸಿರು!

ನಡುವೆ ಈ ಹಾದಿ—
ಇದು ಸ್ವರ್ಗಕೆ ಹೋಗುವ ಬೀದಿ!
ಕಣ್ಣು, ಕಿವಿ, ಮೂಗೆಲ್ಲವ ಮುಚ್ಚು,

ದೇಹಕೆ ಕಬ್ಬಿಣ ಕವಚವ ಕಟ್ಟು
ಉರುಳುರುಳು, ಓ ಮುಂದಕೆ ಉರುಳು!
ಅಡೆತಡೆಯನು ಕುಟ್ಟುತ ನುಸ್ನುಗ್ಗು
ಉರುಳುರುಳು, ಓ ಮುಂದಕೆ ಉರುಳು!
ಇದುವೇ ಸ್ವರ್ಗಕೆ ಹೋಗುವ ದಾರಿ!
ಈ ಹಾದಿ—
ಇದು ಸ್ವರ್ಗಕೆ ಹೋಗುವ ಬೀದಿ!

(೨೬-೧೦-೧೯೩೪)

ವರುಷದ ಹಿಂದಿನ ಈದಿನ

ವರುಷದ ಹಿಂದಿನ ಈ ದಿನ--
ಆಹ, ಅಂದಿನ ಕ್ಷಣಕ್ಷಣ.....
ಇದೇ ಸಂಜೆ ಪಡುಗಡಲತಡಿ,
ಚಿನ್ನದ ಚೆಂಡು ರವಿ
ಇದೇ ಮರಳ ಹಾಸಿಗೆ, ತೆರೆ, ನೊರೆಗಳು
ಸುಯ್‌ಸುಯ್ ಶಬ್ದಸವಿ!
ಅಂದೂ ಇದೇ ಮಿತ್ರಮಂಡಳಿ
ಉಫ್ ಎನೆ ಹೊಗೆ ಸುರುಳಿ
ಅಲ್ಲಿ ಸುಳಿಯುವ ಹರಟೆಯ ಗಾಳಿ
ಭೋರೆನ್ನುವ ಗಾಳಿ

ವರುಷದ ಹಿಂದಿನ......
ಆಹ, ಇಂದಿನ.....
ಅದೇ ಸಂಜೆ ರವಿ, ಕಡಲತಡಿ.....
ಎಲ್ಲ ನುಂಗಿ ಮೈಚಾಚಿ ಒರಗಿದೆ
ನುರುಳು ಮರುಳು ಈ ಮರಳರಾಶಿಯಿದು
ಕೋಪಶಾಪಗಳ ಬಡಿದು ಈ ತೆರೆ
ಸೋತು ಬಿಸುಸುಯ್ದು ಮರಳುತಿದೆ
ಓ, ಎಷ್ಟು ಹಗುರ ಈ ಕಡಲ ಗರ್ಜನೆ—
ಮೌನದೆದುರು ಹಿಂಜರಿಯುತಿದೆ.....

ಇತ್ತ ಈ ಮನಸು
(ಕಡಲ ಕುಡಿವೆನೆಂದೇ ಅಂದು ಅದು ಕಂಡ ಕನಸು!)
ಇಂದು ಒಳಗೊಳಗೆ ಗೊಣಗುತಿದೆ,
ಗೋಳಾಡುತಿದೆ—
"ವರುಷದ ಹಿಂದಿನ ಈ ದಿನ—
ಆಹ, ಅಂದಿನ ಕ್ಷಣಕ್ಷಣ....."

ಉಗುರು? ಎಲುಬು? ಬಿಡು–ಕತ್ತಿ ಕೊಡಲಿಗೂ
ಮಣಿಯದಲ್ಲ ಈ ಮರಳಕಣ!
ಬಂದು ಬಡಿಯುತಿದೆ ಮನದ ಚೆಂಡು ಈ
ಬಂಡೆ ಅದನತ್ತ ನೂಕುತಿದೆ
ತೆರೆ–ನೊರೆ, ಕೊಳೆ, ಕಂಬನಿ ಲೇಪಿಸುತಿವೆ
ಅಲ್ಲಿ–ಇಲ್ಲಿ ಮನ ಹೊರಳುತಿದೆ.....
ಕೊಳಕು ಹುಳಿನಾತ ಹೊರಡುತಿದೆ.....
ಮತ್ತೂ ಗೊಣಗುತಿದೆ–
        ವರುಷದ ಹಿಂದಿನ ಈ ದಿನ—
        ಆಹ, ಅಂದಿನ ಕ್ಷಣಕ್ಷಣ....

(೨೨-೧೨-೧೯೫೩.)

ಜಾಗೃತಿ

ಅದೊ ಕವಿದು ಕವಿದು ಬಂತು ಕಾರಿರುಳ ಹಿಂಡು ಹಿಂಡು,
ಕೆಸರು ಹೊಗೆಯ, ಸಿಡಿಲ ಗರ್ಜನೆಯ ದಂಡು ದಂಡು;
ಇಲ್ಲಿ ಇದು ರವಿವರ್ಮನ ಶೈಲಿ, ಅದು ವೊಗಲಕಲಿ
ಎಂದು ಬಾನು–ನೆಲದ ನಡುವೆ ಕುಂಚಕನಸಕಾಣುತಿರಿ
ಬಳಿಯು ಕಪ್ಪು ಮಸಿಯ ಕುಪ್ಪಿ ಮಗುಚಿ ಎಲ್ಲ ಸುಂಗಿತು;
ಮಂದಾನಿಲಗೆಂದು ತೆರೆದ ಮೂಗುಮುಚ್ಚಿ, ಉಸಿರುಕಟ್ಟಿ,
ಜೀವ ಒಳಗೆ ನರಳಿತು;
ಎದೆ ಬಡಿತದ ಲಾಸ್ಯ ರುದ್ರ ಅಟ್ಟಹಾಸವಾಯಿತು
ಈಜಿ ಬದುಕಿಕೊಳ್ಳುವೆನೋ–
ಕಣ್ಣೀರಿನ ಕೆರೆಯೊಳಿಲ್ಲ ಒಂದೆ ಒಂದು ನೀರಹನಿ
ಕೆಸರಿನಲ್ಲಿ ಕಾಲುಹೂತು ಜೀವ ತಳಮಳಿಸುತಿದೆ,
ಟಿಕ್ ಟಾಕ್ ಟಿಕ್ ಟಾಕ್
ಜೀವನದ ಪೆಂಡುಲಾಮು ಜೋಕಾಲಿಯ ನಾಡುತಿದೆ,
ಟಿಕ್ ಟಾಕ್ ಟಿಕ್ ಟಾಕ್
ಸಾವು ಹೊರಗೆ ಕಟಕಟನೆ ಬಾಗಿಲನು ಬಡಿಯುತಿದೆ,
ಹೃದಯದ ಗಡಿಯಾರವಿಲ್ಲಿ ಅಕಟಕಟವೆನ್ನುತಿದೆ,
ಕತ್ತುಮುರಿದ ಕೋಳಿ ಕಾಲು ರಪರಪನೆ ಬಡಿಯುತಿವೆ
ಕರುಳೆಮೆದೆಯ ಮಿಡಿಯುತಿದೆ.....
ಅಷ್ಟರಲ್ಲಿ ಇದೇನಿದು?
ಟಿಟ್ಟಿರಿಟಿರಿ ಟಿಟ್ಟಿರಿಟಿರಿ ಗಡಿಯಾರದ ಎಲರಾಂ!
ಬೆಚ್ಚಿಹಾರಿ ಎದ್ದುಕುಳಿತೆ,
ಹೃದಯ ಯಂತ್ರ ಒಮ್ಮೆ ನಿಂತು ಮತ್ತೆ ಕಿವಿಯ ಕೊಟ್ಟಿತು—
ಟಿಟ್ಟಿರಿಟಿರಿ ಟಾಕುಟೀಕ್–
ಟಿಟ್ಟಿರಿಟಿರಿ ಟಾಕುಟೀಕ್–
ಕನಸನಳಿಸಿ ಮುಂಜಾನೆಯ ಬೆಳಕತಂದೆ ಭೋಪರಾಕ್!

ಪಕ್ಷಿ ಕರಡಿಗೆಯಲಿ ಬಿಳಿಯ ಬತ್ತಿಯಿದೆ— ಹಾರಿಸು ಹೊರಗೆ—
ಕಿಟಿಕಿ ಬಾಗಿಲುಗಳನೆಲ್ಲ ಒಡೆದುಕೆಡೆದು ಒಗೆಹೊರಗೆ—
ಇದೋ ನೆಲ, ಅದೋ ಜಲ,
ಬೀಸುತಿದೆ ಮಂದಾನಿಲ,
ಹಾರು, ಕುಣಿ, ಹಾಕು ಕೇಕೆ!

(೩-೧-೧೯೩೪.)

ನಮ್ಮ ದೂಮ ಹೊಲವನುಳುತಿರುವಾಗ—

ನಮ್ಮ ದೂಮ ಹೊಲವನುಳುತಿರುವಾಗ,
ಭೂಮಿತಾಯಿ ಕೋಪದಿಂದ ಕುದಿವಳು—
ಪ್ರಕೃತಿದೇವಿ ಸಿಟ್ಟಿನಿಂದ ಸಿಡಿವಳು—
ಗಿಡಗಂಟೆಯು ಕೇಕೆಹಾಕಿ ನಗುವುದು—
ಗಾಳಿ ಛೀಳಿಡುವುದು.

ನಮ್ಮ ದೂಮ ಹೊಲವನುಳುತಿರುವಾಗ
ಕುದಿದು ಕುದಿದು ಭೂಮಿತಾಯಿ
ಪಚಪಚನೆ ಕೆಸರು ಬಾಯಿ ತೆರೆದು ಬಯ್ಯುವಳು
ಕಲ್ಲು ಹೆಂಟೆಯೆತ್ತಿ ಬೆರಳ ಹೊಡೆವಳು.
ಅಲ್ಲಿ ಇಲ್ಲಿ ಮುಳ್ಳಿನಿಂದ ಸೀಳುವಳು.
ಒಮ್ಮೊಮ್ಮೆ ಮುಖಕೆ ಕೆಸರನೆಸೆವಳು.

ನಮ್ಮ ದೂಮ ಹೊಲವನುಳುತಿರುವಾಗ
ಸುತ್ತುಸಾಲುಗಟ್ಟಿ ನಿಂತ "ತೆಂಗುಗಳು ತಲೆದೂಗಿ
ಬಾಳೆಗಳು ತೋಳಬೀಸಿ"—
ಕರಕರನೆ ಭೂತ ನಗೆಯ ನಗುವುವು.
"ಓ ಬೇಲೇ . . . ಓ . .ಬೇಲೇ. . ಓ-ಬೇ-ಲೇ-ಏ . . ."
ಆಹ ಎಂಥ ಸಂಗೀತ ಎಂದು ಕೆಸರು ಕೇಕೆ ಹಾಕಿ ಚಿಮ್ಮಿತು
ನಿಂದು ಬಂದ ಹಂದಿ ಬಾಲ ಚಾಮರವನು ಹಾಕಿತು.
"ಓ ಬೇಲೇ . .ಬೇಲೇ . . ಓ ಬೇ-ಲೇ-ಏ- - -"
ಎಂಥ ಬೇಲೆ!
ಮೈಲುದ್ದಕೆ ಎಳೆದರೂ
ಬೇಟೆಯ ಸಂಗೀತದ ದಾರ ಮುಗ್ಗರಿಸಿತು
ಬಿಳಿಯ ಮುಳ್ಳುಬೇಲಿಯಲ್ಲಿ ಸಿಕ್ಕಿ ಒದ್ದಾಡಿತು.
ಚೂರು ಚೂರಾಯಿತು.

ನಮ್ಮ ದೂರು ಹೊಲವನುಳುತ್ತಿರುವಾಗ
ಕರಿಯ ಟಾರು ರಸ್ತೆಯಲ್ಲಿ ಕೆಂಪು ಮೋಟಾರು ಕಾರು
ಸದ್ದಿಲ್ಲದೆ ತೇಲಿ ತೇಲಿ
ಗಂಟೆಗೈವತ್ತು ಮೈಲು ಓಡುತ್ತಿತ್ತು....
ಮಂದವಾಗಿ ಬಂದ ಪೆಟ್ರೋಲಿ ಪರಿಮಳವ ಮೂಸಿ
ಮಲ್ಲಿಗೆಯ ಬಳ್ಳಿ ನಾಚಿ ಸೆರಗ ಸರಿಪಡಿಸುತ್ತಿತ್ತು......

(೧೪-೧-೧೯೫೪.)

ಯಾರಿಲ್ಲಿಗೆ ಬಂದರು ಕಳೆದಿರುಳು

ಯಾರಿಲ್ಲಿಗೆ ಬಂದರು ಕಳೆದಿರುಳು
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು

ನೆನೆದು ನೆನೆದು ತನು ಪುಳಕಗೊಳ್ಳುತಿದೆ
ನುಡಿವೆನೆ ದನಿ ನಡುಗುತಿದೆ
ಸ್ಮೃತಿ ವಿಸ್ಮೃತಿಗಳ ಕಂಬನಿ ಮಾಲೆ
ಎಲ್ಲೆಲ್ಲೂ ತೂಗುತಿದೆ
ಕಳೆದಿರುಳಿನ ಬೆಳದಿಂಗಳ ಮರೆಯಲಿ
ಏನೂ ಅರಿಯದ ಮುಗ್ಧೆಯ ಕಿವಿಯಲಿ
ಯಾರೇನನು ಪಿಸು ನುಡಿದರು ಹೇಳು
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

ನಸುಕಿನ ಬೆಳಕಿನೊಳೆಂಥ ಬಳಲಿಕೆ
ಮೂಡಲ ಹಣೆ ಕಡುಗೆಂಪು!
ಮರಮರದೆಡೆಯಲಿ ಕೂಕು ಆಟ
ಭೂಮಿಗೆ ಮೈಮರೆವು
ಅಲ್ಲಿ ಇಲ್ಲಿ ಗಿಡ ಬಳ್ಳಿ ಮರಗಳು
ಯಾವ ನೆನಪಿನಲೊ ಮೈಮರೆತಿಹವು
ಹೃದಯದೊಳೇನನು ಎರೆದರು ಕೊಡೆದರು?
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

ಮೈಯೆಲ್ಲಾ ಗಡಗುಟ್ಟುತಲಿದೆಯೇ
ಬೆದರಿಸಿದವರಾರು?

ಮುಖ ತೊಯ್ದಿದೆ, ಕಣ್ಣೀರಿನ ಹನಿಯನು
ಹರಿಯಿಸಿದವರಾರು?
ಯಾರೂ ಕಾಣದ ಆ ಮರೆಯೊಳಗೆ
ಕುಲುಕುಲು ಎನುತಿದೆ ಮೆಲುನಗೆಯು ನೊರೆ
ನಿನ್ನೆಯ ಹಾಡಿನ ದನಿಯನ್ನೂ ಗುಣು-
ಗುಣಿಸುವ ಮಾಯೆಯಿದೆಂಥದು ಹೇಳು
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

(೧೪-೩-೧೯೫೪.)

ಕವಿ ಯಮ್ರುಂಜ ರಾಮಚಂದ್ರ

"The bloom, whose petals nipped before they blew
Died on the promise of the fruit, is waste."

—Shelly.

೧

ಕರ್ನಾಟಕ ಕಾವ್ಯಲೋಕ ಇತ್ತೀಚೆಗೆ ಇಬ್ಬರು ಪ್ರವರ್ಧಮಾನರಾಗಿದ್ದ ತರುಣ ಕವಿಗಳನ್ನು ಕಳೆದುಕೊಂಡಿತು: ಒಬ್ಬರು ಕೆ. ರಾಮಚಂದ್ರ, ಇನ್ನೊಬ್ಬರು ಯಮ್ರುಂಜ ರಾಮಚಂದ್ರ. ಇಬ್ಬರ ಬಾಳಿನ ಮುಗಿವೂ ಒಂದೇ ಬಗೆಯದಾಯಿತು. ಜೀವಸತ್ವವನ್ನು ನಿಧಾನವಾಗಿ ಹೀರುವ ಭಯಂಕರ ರೋಗಕ್ಕೆ ತುತ್ತಾಗಿ ಇಬ್ಬರೂ ಅಕಾಲಮೃತ್ಯುವಿಗೆ ಈಡಾದವರು. ಉತ್ತಮ ವರ್ಗದ ಮಾನವರು, ಉಜ್ವಲ ಭವಿಷ್ಯವಿದ್ದ ಕವಿಗಳು. ಯಮ್ರುಂಜ ರಾಮಚಂದ್ರ ೧೯೫೭ರ ಜನವರಿಯಲ್ಲಿ ಮೃತರಾದರೆ, ಕೆ. ರಾಮಚಂದ್ರ ಫೆಬ್ರವರಿಯಲ್ಲಿ. ಇಂಥ ತರುಣರ ಸಾವು ಬಂಧುಮಿತ್ರರೆಲ್ಲರ ಅಪಾರಶೋಕಕ್ಕೆ ಕಾರಣವಾಗುವುದು ಸಹಜ. ಆದರೆ ಈ ಕವಿಗಳ ಸಾವಿನಿಂದ ಕನ್ನಡ ಸಾಹಿತ್ಯಲೋಕಕ್ಕೂ ನಿಜವಾದ ನಷ್ಟವಾಗಿರುವುದರಿಂದ ಈ ಇಬ್ಬರನ್ನು ಕುರಿತು ಯೋಚಿಸುವಾಗ ವೈಯಕ್ತಿಕ ದುಃಖಕ್ಕೆ ಸಾರ್ವತ್ರಿಕದ ವೈಶಾಲ್ಯ ಬರುತ್ತದೆ; ಕಾವ್ಯಪ್ರೇಮಿಗಳೆಲ್ಲರಿಗೂ ಈ ದುಃಖ ತಟ್ಟುತ್ತದೆ.

ಯಮ್ರುಂಜ ರಾಮಚಂದ್ರ ಇಲ್ಲಿ ಹೆಚ್ಚು ಕಾಲ ಬದುಕಲಿಲ್ಲ: ೯-೨-೧೯೩೪ರಲ್ಲಿ ಜನಿಸಿ ೧೦-೧-೫೭ರಲ್ಲಿ ನಿಧನರಾದರು. ಈ ಲೋಕದಲ್ಲಿ ಹೀಗೆ ಅವರು ಬಾಳಿದ್ದು ಕೇವಲ ಇಪ್ಪತ್ತೆರಡು ವರ್ಷಗಳ ಅಲ್ಪಾವಧಿಯ ಕಾಲ. ಅದರಲ್ಲೂ ಅವರ ಜೀವಿತದ ಕೊನೆಯೆರಡುಮೂರು ವರ್ಷಗಳಲ್ಲಿ ಮೃತ್ಯುವಿನ ಹೆಡೆಯ ನೆರಳಿನಲ್ಲೇ ತಮ್ಮ ತತ್ತರಿಸುತ್ತಿದ್ದ ಬಾಳನ್ನು ಹಿಡಿದು ಅವರು ಇಲ್ಲಿ ನರಳಿದರು. ಪರಿಪೂರ್ಣತೆಗಾಗಿ ನಿರಂತರವಾಗಿ ತುಡಿಯುತ್ತಾ ಸದಾ ಅತೃಪ್ತವಾಗಿದ್ದ ಈ ಕವಿಯ ಚೇತನ ತನ್ನ ಕೋಲಾಹಲವನ್ನು ಅರಗಿಸಿಕೊಂಡು, ತನ್ನ ನೆಲೆಯನ್ನು ಕಂಡುಕೊಂಡು ಅನುಭವ ಸಮನ್ವಯವನ್ನು ಸಾಧಿಸಿಕೊಳ್ಳುವ ಮೊದಲೇ, ಪ್ರಶ್ನಮಧ್ಯದಲ್ಲೇ ಕೊನೆಯ ತೆರೆ ಕೆಳಕ್ಕಿಳಿದು

ಬಿಟ್ಟಿತು. ಅಕಾಲಮೃತ್ಯುವಿನ ಈ ಕಥೆ ಹಳೆಯದು; ಆದರೂ ಮತ್ತೆ ಮತ್ತೆ ಇದು ಹೊಸತಾಗಿ ತಾಗಿ ದಿಗ್ಭ್ರಮೆ ಹುಟ್ಟಿಸುತ್ತದೆ. ನಿರಾಶೆ ಹೆಪ್ಪುಗಟ್ಟು ವುದು ಇಂಥ ಅಕಾಲಮರಣ ನಮ್ಮ ನರಗಳನ್ನು ಒಡಿದು ಅಮುಕಿದಾಗಲೇ. ಜೀವನವೇ ಅರ್ಥಹೀನವೋ ಎಂಬ ಸಂದೇಹದ ಮಂಜು ಮನಸ್ಸನ್ನಾವರಿಸು ವುದೂ ಇಂಥ ಕಾಲದಲ್ಲೇ. ಹುಟ್ಟಿದ್ದಕ್ಕೆ ಸಾವು ಕಟ್ಟಿಟ್ಟದ್ದು ಎಂಬ ಸಂತೈ ಸುವ ಅರಿವು ಮೂಡುವುದು ದುಃಖದ ಕೆನ್ನಾಲಗೆ ಮುದುರಿ ಕೆಂಡದ ಮೇಲೆ ಕೊಂಚ ಕೊಂಚವಾಗಿ ಬೂದಿ ಮುಸುಕತೊಡಗಿದಾಗಲೇ. ಆ ನಡುವೆ ನಿರು ಪಾಯರೂ ಹತಾಶರೂ ಆದ ಬಂಧುಬಾಂಧವರು ಗಾಳಿಯ ತಂತಿಯ ಮೇಲೆ ಕ್ಷಣಕಾಲ ಹರಿದು ಬಂದ ಈ ಅಪೂರ್ವ ಗಾನಲಹರಿ ಹಠಾತ್ತಾನೆ ನಿಂತು ದನ್ನು ಕಂಡು, ಮಣ್ಣಿನ ಹೊದಿಕೆಯಲ್ಲಿ ಹೇಗೋ ಹರಿಯುತ್ತಿದ್ದ ಈ ವಿದ್ಯು ತ್ತಿನ ಪವಾಡ ಇದ್ದಕ್ಕಿದ್ದಂತೆ ಹೊದಿಕೆಯೊಡೆದು ಹೊರಬಿದ್ದು ಇಲ್ಲವಾದು ದನ್ನು ಕಂಡು ಶೋಕದಿಂದ ಮೂಕರಾಗಿ ಜನ್ಮ ಮೃತ್ಯುಗಳ ಗಭೀರ ಸಮ ಸ್ಯೆಯ ಚಕ್ರವ್ಯೂಹದ ಹೊರಬಾಗಿಲ ಮುಂದೆ ತಲೆಬಾಗಿಸಿ ನಿಲ್ಲಬೇಕು– ಅಷ್ಟೆ.

ಯರ್ಮುಂಜ ರಾಮಚಂದ್ರರ ಜೀವ ಸಾಮಾನ್ಯವಾದದ್ದರಲ್ಲಿ ತೃಪ್ತಿ ಯನ್ನು ಕಂಡು ಬಾಳಿನ ಒಂದು ಕೆಳಮಟ್ಟದಲ್ಲಿ ಜೀವನದ ಗುರಿಯನ್ನು ಸಾಧಿಸಿ ಕೃತಾರ್ಥವಾಗುವಂಥದಿರಲಿಲ್ಲ. ತನ್ನ ಸುತ್ತಮುತ್ತಣ ವಾತಾವರಣ ವನ್ನು ಮೀರಿ ಕ್ಷಣಕ್ಷಣಕ್ಕೂ ಮೇಲೇರಲು ಬಯಸುತ್ತ, ಉತ್ತುಂಗವೂ ವಿಶಾ ಲವೂ ಆದ ತನ್ನ ಕನಸಿನ ಸಾಮ್ರಾಜ್ಯವನ್ನು ಅಂಗುಲಂಗುಲವಾಗಿ ಆವರಿಸಿ ಆಕ್ರಮಿಸಿಕೊಳ್ಳಲು ಯತ್ನಿಸುತ್ತಿದ್ದ ಉನ್ಮುಖಚೇತನ ಆತನದು. ಜ್ಞಾನದ ದಾಹ, ಅನುಭವದ ಹಸಿವು– ಇವು ಆತನನ್ನು ಯಾವೊಂದು ಸಣ್ಣ ಜಾಗ ದಲ್ಲೂ ಸಣ್ಣ ಗುರಿಯಲ್ಲೂ ನೆಮ್ಮದಿಯಿಂದಿರಲು ಬಿಡದೆ ಹೋದುವು. ಹೈಸ್ಕೂಲಿನಲ್ಲಿ ಓದುತಿದ್ದಾಗಲೇ ದೇಶಭಕ್ತಿಯ ಜಾತ್ಯತೀತ ಮನೋಭಾವ ಆತನ ಕೃತಿಯಲ್ಲೂ ಮಾತಿನಲ್ಲೂ ಆವಿಷ್ಕಾರಗೊಂಡಿತು. 'ಪಾಂಚಜನ್ಯ' ಎಂಬ ಕೈಬರೆಹದ ಪತ್ರಿಕೆಯನ್ನು ಬಹುಕಾಲ ಸಂಪಾದಿಸಿದರು; ಎಸ್. ಎಸ್. ಎಲ್. ಸಿ. ಮುಗಿದ ಬಳಿಕ ಕನ್ನಡ, ಸಂಸ್ಕೃತ, ಹಿಂದಿ– ಈ ಭಾಷೆಗಳ ಅಧ್ಯಯನವನ್ನು ನಿರಂತರವಾಗಿ ಸಾಗಿಸಿದರು. ಜೀವನೋಪಾಯಕ್ಕೆ ಅತ್ಯಗತ್ಯ ವಲ್ಲದೆ ಇದ್ದರೂ ಕೂಡಾ ಅಧ್ಯಾಪಕನಾಗಿ, ಪೋಸ್ಟುಮಾಸ್ಟರ್ ಆಗಿ ಕೆಲಸ

ಮಾಡುತ್ತ ವಾಸ್ತವ ಜಗತ್ತಿನೊಡನೆ ನಿಕಟಸಂಪರ್ಕವನ್ನು ಬೆಳಸಿಕೊಂಡರು. ಕೊನೆಗೆ ಪತ್ರಿಕೋದ್ಯಮಿಯಾಗಿ ಮಂಗಳೂರನ್ನು ಸೇರಿ ದೇಹವನ್ನು ಸವೆದರು. ಆರೋಗ್ಯ ಕೆಟ್ಟರೂ ಕೆಲಸಮಾಡಲು ಎಲ್ಲಿಯ ವರೆಗೆ ಸಾಧ್ಯವೋ ಅಲ್ಲಿಯ ವರೆಗೂ ದುಡಿದರು. ಕೆಡುತ್ತಿದ್ದ ಆರೋಗ್ಯ ತೀರ ಕೆಟ್ಟಿತು. ಕೊನೆಗೆ ದೇಹ ಯಂತ್ರ ಈ ಜೀವವನ್ನು ಹಿಡಿದು ನಿಲ್ಲಿಸಲು ಅಸಮರ್ಥವಾಯಿತು. ನಮ್ಮ ರಾಮಚಂದ್ರ ಇಲ್ಲವಾದರು. ಸನ್ನಿಹಿತವಾಗಿದ್ದ ಮರಣದ ಮುನ್ನರಿವಿನಿಂದ ಆತನ ಮನಸ್ಸು ಪಟ್ಟಿರಬಹುದಾದ ಸಂಕಟವನ್ನು ನಾವು ಊಹಿಸಬಹುದು. ಆದರೂ ಕೊನೆಗೆ ಮರಣವೇ ತನಗೆ ನಿಜವಾದ ಬಿಡುಗಡೆ ಎಂದು ಕೂಡಾ ಆ ಆತ್ಮಕ್ಕೆ ಅನ್ನಿಸಿತ್ತೋ ಏನೋ– ಯಾರು ಬಲ್ಲರು?

ಆದರೆ ಮುಖ್ಯವಾಗಿ ನಾವು ಈಗ, ಇನ್ನು ಮುಂದೆ ಯರ್ಮುಂಜ ರಾಮಚಂದ್ರನನ್ನು ನೆನೆಯುವುದು ಕವಿ ಎಂದು. ಆತನ ಕವನಗಳೂ, ಕತೆಗಳೂ, ಹರಟೆಗಳೂ ಆಗಲೇ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುವು. ಈ ಕವಿಯನ್ನು ನಾವು ನೆನಸಬೇಕಾದ್ದು ಎರಡು ಕಾರಣಗಳಿಗಾಗಿ. ಆತ ಕೇವಲ ಪದ್ಯರಚನೆ ಮಾಡಬಲ್ಲ ಚತುರತರುಣನಾಗಿರಲಿಲ್ಲ, ನಿಜವಾದ ಕವಿಯೇ ಆಗಿದ್ದ ಎಂಬುದು ಒಂದು. ಅನುಭವಕ್ಕೆ ತಕ್ಕ ಪ್ರತಿರೂಪವನ್ನು ಭಾಷೆಯಲ್ಲಿ ತಕ್ಕ ಪ್ರತಿಮೆಗಳ ಮೂಲಕ ಸಿದ್ಧಗೊಳಿಸಬಲ್ಲವನೇ ಕವಿ. ಅಂಥ ಕಲೆಗಾರಿಕೆ ರಾಮಚಂದ್ರರ ಕವನಗಳಲ್ಲಿ ಉದ್ದಕ್ಕೂ ಕಂಡುಬರುತ್ತದೆ. ಎರಡನೆಯದಾಗಿ ಕಾವ್ಯಪ್ರಿಯರಾಗಿ ನಾವು ಈ ಕವಿಯ ಮರಣದಿಂದ ದುಃಖಪಡುವುದು ಆತನ ಶಕ್ತಿ ನಿರಂತರವಾಗಿ ಆಶ್ಚರ್ಯಕರವಾಗಿ ಬೆಳೆಯುತಿದ್ದದ್ದರಿಂದ. ಎಷ್ಟೋ ಜನ ಎಳವೆಯ ಆವೇಶದಲ್ಲಿ ಕೆಲವು ಕವನಗಳನ್ನು ಸಫಲವಾಗಿ ರಚಿಸಿಬಿಡುವುದುಂಟು. ಆದರೆ ಆ ಆವೇಶ ಬಹುಬೇಗ ತಗ್ಗಿ ಅವರ ಮನಸ್ಸು ಬರಡುಬೀಳುವುದೇ ಹೆಚ್ಚು. ಅಂಥ ಅಲ್ಪಸತ್ವದ ಕವಿ ಈತನಲ್ಲ. ಸುಮಾರು ೧೯೪೮ರಲ್ಲಿ ಎಂದರೆ ಕವಿ ತನ್ನ ಹದಿನೈದನೆಯ ವರ್ಷದಲ್ಲಿ ಇನ್ನೂ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಪ್ರಕಟವಾದ ಆತನ ಪ್ರತಿಭೆ ವರ್ಷವರ್ಷಕ್ಕೂ ಬೆಳೆಯುತ್ತ ಹೋಗಿ ಕೊನೆಯ ಎರಡುಮೂರು ವರ್ಷಗಳಲ್ಲಂತೂ ಅತ್ಯದ್ಭುತವಾದ ಪ್ರಗತಿಯನ್ನು ತೋರಿ ಅತ್ಯುತ್ತಮಕ್ಕೆ ಬಲುಹತ್ತಿರ ಎನ್ನುವಂಥ ಕವನ ರಚನೆಗೆ ಸಮರ್ಥವಾಯಿತು. ಆತನ ಕೊನೆಕೊನೆಯ ಕವನಗಳನ್ನು ಓದಿದಾಗ ಅಲ್ಲಿನ

ಪರಿಪಾಕವನ್ನು ಕಂಡಾಗ, ಆತ ಬದುಕಿದ್ದಿದ್ದರೆ ಕನ್ನಡನಾಡಿನ ಪ್ರಮುಖ ಕವಿಗಳಲ್ಲೊಬ್ಬನಾಗಬಹುದಿತ್ತು ಎಂಬ ಅಭಿಪ್ರಾಯ ಖಚಿತಗೊಳ್ಳುತ್ತದೆ. ಅಷ್ಟು ಹೊತ್ತಿಗೇ ರಾಮಚಂದ್ರ ತನಗೆ ಸಹಜವಾದ ಶೈಲಿಯನ್ನು ರೂಪಿಸಿಕೊಂಡಿದ್ದ; ಪ್ರತಿಯೊಂದು ಅನುಭವದ ವೈಶಿಷ್ಟ್ಯವನ್ನೂ ಹಿಡಿಯಬಲ್ಲ ಸೂಕ್ಷ್ಮವೇದಿತ್ವ ಸಿದ್ಧಿಸುತ್ತಿತ್ತು; ಒಂದು ಹೇಳಿ ಹತ್ತನ್ನು ಸೂಚಿಸುವ ಧ್ವನಿಶಕ್ತಿ ಹಸ್ತಗತವಾಗುತ್ತಿತ್ತು. ಇಂಥ ಕಾಲದಲ್ಲೇ ಆತ ಮೃತನಾದದ್ದು ಅತ್ಯಂತ ಶೋಚನೀಯ ಸಂಗತಿ.

ಕವಿ ಯರ್ಮುಂಜ ರಾಮಚಂದ್ರ ಜೀವಿಸಿದ್ದಾಗಲೇ ಅತ್ಯಂತ ಸಂತೋಷದಿಂದಲೂ ಹೆಮ್ಮೆಯಿಂದಲೂ ಆತನ ಕಾವ್ಯ ಜೀವನಕ್ಕೆ ನಾಂದಿಯಾಗಿ ಆಡಬಹುದಾಗಿದ್ದ ಈ ಮಾತುಗಳನ್ನು ನಾನು ಈಗ ನಾಂದಿಯೊಡನೆಯೇ ಭರತವಾಕ್ಯವನ್ನೂ ಹೇಳುತ್ತ ಅತ್ಯಂತ ದುಃಖದಿಂದ ಆಡಬೇಕಾಗಿದೆ. ತನ್ನ ಕವನಗಳನ್ನು ಸಂಕಲಿಸಿ ಪ್ರಕಟಿಸಬೇಕೆಂದಿದ್ದ ಕವಿಯ ಆಶೆ ಕೈಗೂಡುವ ಮೊದಲೇ ಆತ ಈ ಜಗತ್ತನ್ನು ಬಿಟ್ಟು ತೆರಳಿದ. ಈ ಕವಿಯನ್ನು ಮುಖತಃ ನೋಡಲು ಆಗಲಿಲ್ಲವಲ್ಲ ಎಂಬುದು ನನ್ನ ಜೀವನದಲ್ಲಿನ ಮುಖ್ಯ ಪಶ್ಚಾತ್ತಾಪಗಳಲ್ಲೊಂದು. ಈ ಕವಿ ನನ್ನಲ್ಲಿಟ್ಟಿದ್ದ ಪ್ರೀತ್ಯಾದರಗಳ ಕುರುಹಾಗಿ ಈಗ ನನಗೆ ಉಳಿದಿರುವುದು ಆತ ಬರೆದಿದ್ದ ಒಂದೆರಡು ಪತ್ರಗಳು ಮಾತ್ರ. ಕನ್ನಡ ಕಾವ್ಯಲೋಕಕ್ಕೆ ಉಳಿದದ್ದೂ ಈಗ ಪ್ರಕಟವಾಗುತ್ತಿರುವ ಈ 'ವಿದಾಯ' ಎಂಬ ಪುಟ್ಟ ಕವನ ಸಂಕಲನ ಮಾತ್ರ.

೨

ಯರ್ಮುಂಜ ರಾಮಚಂದ್ರರ ಕಾವ್ಯಜೀವನ ೧೯೪೮ರಲ್ಲಿ ಆರಂಭವಾಗುತ್ತದೆ. ಈ ವರ್ಷದ ಮತ್ತು ೧೯೪೯ರ ಕವಿತೆಗಳನ್ನು ಮುಖ್ಯವಾಗಿ ಅಭ್ಯಾಸ ಕವಿತೆಗಳೆಂದು ಗಣಿಸಬಹುದು. ತನ್ನ ಸಾಮಗ್ರಿಗಳ ಮೇಲೆ ಹತೋಟಿ ಪಡೆಯಲು ಕವಿ ಇಲ್ಲಿ ಯತ್ನಿಸುತ್ತಿರುವುದು ಕಂಡುಬರುತ್ತದೆ. ಭಾವಗಳನ್ನು ರಸವಾಗಿ ಪರಿಪಾಕಗೊಳಿಸಲು ಅಗತ್ಯವಾದ ತಾಳ್ಮೆಗಿಂತ ಹೆಚ್ಚಾಗಿ ಮನಸ್ಸಿನಲ್ಲಿದ್ದುದನ್ನೆಲ್ಲ ಛಂದೋಬದ್ಧವಾಗಿ ಹೇಳಿಬಿಡಬೇಕೆಂಬ ಆವಸರ ಇಲ್ಲಿ ಹೆಚ್ಚಾಗಿ ಕಂಡುಬರುವುದು ಹದಿನೈದು-ಹದಿನಾರರ ಮುಗ್ಧ ಉತ್ಸಾಹಕ್ಕೆ ಸಹಜವಾದದ್ದು. ಆದರೆ ಈ ಅಭ್ಯಾಸಕವಿತೆಗಳಲ್ಲೂ ಕಂಡುಬರುವ ಪದ್ಯ

ರಚನಸಾಮರ್ಥ್ಯ, ಭಾಷಾಪ್ರಭುತ್ವ, ಛಂದಸ್ಸಿನ ಮೇಲಿನ ಹಿಡಿತ, ಸಂಪ್ರದಾಯಜ್ಞಾನ– ಇವು ಉತ್ತಮ ಸಂಸ್ಕಾರಕ್ಕೂ ಸಹಜಕಾವ್ಯಶಕ್ತಿಗೂ ನಿದರ್ಶನ. ಕವಿ ೪–೭–'೪೮ರಲ್ಲಿ ಬರೆದ 'ಬಾಳ ಬೆಳಕು' ಎಂಬ ಪದ್ಯದಲ್ಲಿನ

ಹೃದಯ ಗುಡಿಯನು ತೊಳೆದು, ಬಾನಿನಿರುಳನು ಕಳೆದು
ಎದೆಗೆ ಹೊಂಬೆಳಕು ಬಂತು;
ಜೀವನದ ಆಗಸದಿ ಕವಿದ ಮೋಡವ ಸರಿಸಿ
ಕತ್ತಲನು ಕಳೆಯ ಬಂತು—

ಎಂಬ ಸಾಲುಗಳಲ್ಲೂ, ೯—೫—೪೮ರಲ್ಲಿ ಬರೆದ 'ಗುಡಿಯ ಶಿಲೆಗೆ' ಎಂಬ ಕವನದಲ್ಲಿ ಬರುವ

ಎನಿತು ಯುಗಗಳು ಉರುಳಬೇಕೆನಿತು ನೆತ್ತರಿನ
ಹೊಳೆ ನಿನ್ನ ಕಾಲುಗಳ ತೊಳೆಯಬೇಕು?
ನಿನ್ನ ಕಲ್ಮನದ ರುದ್ರಸಮಾಧಿಯಳಿಯಲ್ಕೆ
ಎನಿತು ಕಣ್ಣೀರ ಅಭಿಷೇಕ ಬೇಕು?

ಎಂಬಂಥ ಸಾಲುಗಳಲ್ಲೂ ಪದ್ಯ ಕಾವ್ಯಪರಿಪಾಕವನ್ನು ಮುಟ್ಟದೆ ಇದ್ದರೂ ಕೂಡಾ ಇಲ್ಲಿ ಕಂಡುಬರುವ ಲಯಶುದ್ಧಿ ಆ ವಯಸ್ಸಿಗೆ ಅಪೂರ್ವವೇ ಎನ್ನಿಸುತ್ತದೆ. ಹೀಗೆ ಆರಂಭವಾಗುವ ಈ ಕವಿಯ ಪ್ರತಿಭೆ ಬಹು ಬೇಗ ಪರಿಪಾಕಗೊಳ್ಳುತ್ತದೆ. ೧೯೪೯ರಲ್ಲೇ ಕಾವ್ಯದಲ್ಲಿ ಇವರ ಹಿಡಿತ ಇನ್ನೂ ಬಿಗಿಗೊಳ್ಳುವುದು ಕಾಣುತ್ತದೆ. ಲಾಸ್ಯಗತಿಯಲ್ಲಿ ರಚಿತವಾಗಿರುವ 'ಯಾಕಣಕಿಪೆ ಈ ತೆರ?' ಎಂಬ ಕವನದಲ್ಲಿ ನಸುವಿಷಾದದ ಮೂಲಭಾವ ಛಂದಸ್ಸಿನ ನೃತ್ಯಗತಿಯಲ್ಲಿ ಸಮನ್ವಯಗೊಂಡು ಕವನಕ್ಕೊಂದು ಅಪೂರ್ವ ಸಂಕೀರ್ಣತೆಯ ಸೊಬಗು ಸಿದ್ಧಿಸುತ್ತದೆ. ಈ ಕವನದ ಗತಿಯಲ್ಲಿ ನೃತ್ಯವೈವಿಧ್ಯ, ಸರಳವಾದರೂ ಮೋಹಕವಾದ ಶಬ್ದಸಂಗೀತ, ಸುಖವಾದ ಗರಿಹಾರಾಟದ ಹಗುರುತನ ಮೈಗೂಡುತ್ತದೆ.

ಯಾಕಣಕಿಪೆ ಈ ತೆರ, ಓ ಸಂಜೆ?
ನನ್ನ ದುಗುಡವೇ ನಿನ್ನಾಟ?
ಓ ಬಾಂದಳವೇ, ನೀನೂ ಕಲಿತೆಯ
ಕಂಬನಿಯುಗುಳುವ ಈ ಆಟ?

ಇಲ್ಲಿ 'ಯಾಕಣಕಿಪೆ ಈ ತೆರ, ಓ ಸಂಜೆ' ಎಂಬ ಸಾಲಿನಲ್ಲಿ ವ್ಯಕ್ತವಾಗುವ

ಮೋಹಕ ನಾದಸಂಪತ್ತು, ಹಗುರುನಡೆ ಈ ಕವಿಯಲ್ಲಿ ಬಹು ಶೀಘ್ರವಾಗಿ ಸಿದ್ಧಿಸುತ್ತಿದ್ದ ನಾದಪ್ರತಿಭೆಗೆ ಉತ್ತಮ ಉದಾಹರಣೆ.

ಕವಿಯ ಭಾವಕ್ಕೆ ನಿಜವಾದ ಆಳವೂ ಅನುಭವಕ್ಕೆ ವೈಶಾಲ್ಯವೂ ಬಂದು ಕವನದ ಅರ್ಥಪ್ರಪಂಚ ಹಿಗ್ಗುತ್ತಿರುವುದರ ಸ್ಪಷ್ಟ ಲಕ್ಷಣ ಕಾಣಿಸುವುದು ೧೬-೧೧-'೪೯ರಲ್ಲಿ ರಚಿತವಾಗಿರುವ 'ಮಸಣದ ಹೂಗಳು' ಎಂಬ ಕೊಂಚ ದೀರ್ಘವೇ ಆದ ಕವನದಲ್ಲಿ. ಇಲ್ಲಿ ಕವಿಯ ಮುಗ್ಧಮನಸ್ಸು ಮೊತ್ತಮೊದಲನೆಯ ಬಾರಿಗೆ ನಿಷ್ಠುರವಾಸ್ತವತೆಯ ಅರಿವಿಗೆ ಎಚ್ಚರಗೊಳ್ಳುತ್ತದೆ. ಆಗ ಸಹಜವಾಗಿಯೇ ಉಂಟಾಗುವ ನೋವು, ದಿಗ್ಭ್ರಮೆ, ನಿರಾಶೆ ಇವು ಇಲ್ಲಿ ತೀವ್ರವಾಗಿ ಸ್ಪಂದಿಸುತ್ತವೆ. ಮಾನವನ ಕನಸುಹೂಗಳು ಅರಳುವ ಮೊದಲೇ ಕಮರಿಬೀಳುವುವು; ಅಮೃತಕುಂಭವೆಂದು ಬಳಿಸಾರಿದ್ದು ಅಗ್ನಿಕುಂಡವಾಗಿ ಮಾರ್ಪಡುವುದು; ಹಾರಯ್ಕೆಯ ಅರಳೇ ಕಾಳೋರಗವಾಗಿ ಘೂತ್ಕರಿಸುವುದು– ಈ ದುರಂತ ಸತ್ಯಗಳ ಅತ್ಯಂತ ಪರಿಣಾಮಕರ ಚಿತ್ರ ಇಲ್ಲಿ ಮೂಡಿದೆ. ಕವನದಲ್ಲಿ ಇನ್ನೂ ಕಸುಕು ಕಂಡರೂ ಇಲ್ಲಿನ ಪಾಕದಲ್ಲಿ ಬೆರೆತ ವಸ್ತುಗಳ ವೈವಿಧ್ಯ, ಕಾವ್ಯದಲ್ಲಿ ಅಸಮಗ್ರವಾಗಿ ವ್ಯಕ್ತವಾಗಿದ್ದರೂ ಅದರ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಕಾಣುವ ಸೃಷ್ಟಿಶಕ್ತಿಯ ಜ್ವಾಲೆ– ಇವು ಈ ಕವಿ ತನ್ನ ಕಾವ್ಯಲೋಕದಲ್ಲಿ ಇನ್ನೂ ಹತ್ತು ಹೆಜ್ಜೆ ಮುಂದಡಿಯಿಟ್ಟಿದ್ದಾನೆ ಎಂಬುದನ್ನು ತೋರಿಸುತ್ತವೆ. ಕಾವ್ಯ ಇನ್ನೂ ಒಟ್ಟಿನಲ್ಲಿ ಆತ್ಮನಿಷ್ಠವೇ ಆದರೂ ವಸ್ತುಪ್ರಪಂಚಕ್ಕೆ ಅದನ್ನು ಸಂಗತಗೊಳಿಸುವ ಕೆಲಸ ಈ ಕವನದಲ್ಲಿ ಶ್ಲಾಘನೀಯವಾಗಿ ನಡೆಯುತ್ತದೆ:

> ಏನೆ ಪುಟ್ಟ ಮಲ್ಲಿಗೆ,
> ಏಕೆ ಬಂತು ಈ ಕಂಬನಿ ನಿನ್ನ ಮೃದುಕಪೋಲಕೆ?
> ಯಾರು ಉಣ್ಣಲಿಲ್ಲವೆಂದೆ ನಿಮ್ಮ ಗಂಧದೌತಣವ?
> ಯಾರಿಗೂ ಅರ್ಪಿಸಿಲ್ಲವೆಂದೆ ನಿಮ್ಮ ಹರಣವ?

೩

೧೯೫೩-'೫೪ ಈ ಕವಿಯ ಜೀವನದ ಕೊನೆಯ ವರ್ಷಗಳು ಹೇಗೋ ಹಾಗೆಯೇ ಆತನ ಕಾವ್ಯಜೀವನದ ಸುಗ್ಗಿಯೂ ಹೌದು. ಜೀವರಸ ಹೇಗೆ

ಕುಗ್ಗುತ್ತಿತ್ತೋ ಹಾಗೆಯೇ ಕಾವ್ಯರಸ ಹೊಮ್ಮುತ್ತಿತ್ತು. ಅಲ್ಲಿ ನಷ್ಟವಾಗುತ್ತಿದ್ದ ಸತ್ವ ಇಲ್ಲಿ ತುಂಬಿಕೊಳ್ಳುತ್ತಿತ್ತು. ಈ ಎರಡು ವರ್ಷಗಳಲ್ಲಿ ಕವಿ ಅನೇಕ ಉತ್ತಮ ಕವನಗಳನ್ನು ಬರೆದರು. ಇಲ್ಲಿಯ ತನಕ ಸಂಪ್ರದಾಯದ ದಾರಿಯಲ್ಲೇ ನಡೆಯುತ್ತಿದ್ದ ಕವಿ ಈಗ ತನ್ನ ದಾರಿಯನ್ನು ಹುಡುಕಿಕೊಳ್ಳಲು ಹೆಣಗುತ್ತಾನೆ. ಮಾತಿನ ರೀತಿಯಲ್ಲಿ, ಬಳಸುವ ಉಪಮೆರೂಪಕಗಳಲ್ಲಿ, ಒಟ್ಟು ದೃಷ್ಟಿಯಲ್ಲಿ ಹೊಸಬಗೆ, ಪರಿವರ್ತನೆ ಸ್ಫುಟವಾಗಿ ಕಾಣುತ್ತದೆ. ಆಧುನಿಕತೆಯ ಪ್ರಜ್ಞೆ ಕವಿಯಲ್ಲಿ ನಿಚ್ಚಳವಾಗುತ್ತಿರುವುದು ಕವನದಿಂದ ಕವನಕ್ಕೆ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತ ಹೋಗುತ್ತದೆ. ಕಾವ್ಯಪ್ರಿಯರಿಗೆ ಸಂತೋಷ ಕೊಡುವ ಕವನಗಳು ಒಂದಾದಮೇಲೊಂದರಂತೆ ರಚಿತವಾಗುತ್ತವೆ: **'ಬೆಳಕು', 'ಚಂದ್ರಬಿಂಬ', 'ಕ್ಷೋಭೆ', 'ಕಲ್ಪನೆ', 'ಯಾರಿಲ್ಲಿಗೆ ಬಂದರು ಕಳೆದಿರುಳು?'** –ಈ ಎಲ್ಲ ಕವನಗಳೂ ನಿಜವಾದ ಕಾವ್ಯ. ಅಲ್ಲೊಂದು ನ್ಯೂನತೆ, ಇಲ್ಲೊಂದು ದೋಷ ಕಂಡುಬರಬಹುದಾದರೂ ಒಟ್ಟಿನಲ್ಲಿ ಯಾವ ಉತ್ತಮ ಕವಿಯೇ ಆಗಲಿ ತನ್ನ ೨೦, ೨೧, ೨೨ರ ವಯಸ್ಸಿನಲ್ಲಿ ಬರೆದು ಹೆಮ್ಮೆಪಟ್ಟುಕೊಳ್ಳಬಹುದಾದಂಥ ಕವನಗಳಿವು. ಈ ಎಲ್ಲ ಕವನಗಳಲ್ಲೂ ಛಂದೋಗತಿಯೂ ಬಳಸುವ ಭಾಷೆಯೂ ಆಡುವ ಮಾತಿಗೆ ಹತ್ತಿರ ಹತ್ತಿರವಾಗುತ್ತ ಬಂದು ಶೈಲಿಯಲ್ಲಿ ಹೃದ್ಯವಾದೊಂದು ಸಾಮೀಪ್ಯ, ಸಲುಗೆ, ಸಹಜತೆ ಮೈದೋರುತ್ತದೆ. ಹಾಗೆಯೇ ಒಟ್ಟು ಕವನದ ಶಿಲ್ಪದಲ್ಲಿ ಏಕಾಗ್ರತೆಯೂ, ಸಾವಯವಸೌಂದರ್ಯವೂ ಹೆಚ್ಚುಹೆಚ್ಚಾಗಿ ಮೂಡಿಬರುತ್ತವೆ:

> ಆಹ, ಎಲ್ಲಿಂದ ಬಂದಿತೀ ತಂಗಾಳಿ?
> ಇದಕು ನೆಲವೇ ಮನೆಯೇ?
> ಇನ್ನು ಎರೆಹುಳದಂತೆ ಅಲ್ಲಿಯೇ ಸುಳಿಸುಳಿದು ಸುತ್ತುತಿದೆ,
> ಇಂದು ಕಮರಿದ ಮುುಗುಳ ಮನವ ನೇವರಿಸುತಿದೆ,
> ನಾಳೆ ಚಿಗುರಲಿ ಎಂದು ಬೀಜಗಳ ತಟ್ಟಿ ಮೈಮುಟ್ಟಿ ಎಬ್ಬಿಸುತಲಿದೆ;
> ಕತ್ತಲಿನ ಬಸುರಿಂದ ಮೇಲೆದ್ದ ಮರಗಳಿವು
> ಎಂಥ ಹೆಮ್ಮೆಯೊ ಇವಕೆ!-
> ಆಕಾಶದಿಂದಲೇ ಇಳಿದವರೊ ಎಂಬಂತೆ-

ಭಾವಕ್ಕೆ ಸರಿಯಾಗಿ ಹಿಗ್ಗಿಕುಗ್ಗುವ ಸಾಲುಗಳ ಅರ್ಥಸಿಸ್ತು ಛಂದಸ್ಸಿನ ಉಚಿತ

ಗತಿಯಲ್ಲಿ 'ಆಹ, ಎಲ್ಲಿಂದ ಬಂದಿತೀ ತಂಗಾಳಿ' ಎಂಬ ಸಾಲಿನಲ್ಲಿ ಮೊದಲಾಗಿ ಕವನದುದ್ದಕ್ಕೂ ಹರಿಯುವ ಸಲುಗೆ–ನುಡಿಯ ಆತ್ಮೀಯತೆಯಲ್ಲಿ ಈ ಕವನ ಅಪೂರ್ವ ಸಿದ್ಧಿಯನ್ನು ತೋರುತ್ತದೆ, ಇದೇ ಬಗೆಯ ಆತ್ಮೀಯತೆ ಕಾಣುವ 'ವಿದಾಯ' ಎಂಬ ಪುಟ್ಟ ಕವನದಲ್ಲಿ 'ಇಂದು ನಾನೆ ಹೊರಟು ನಿಂತಿರುವೆನು' ಎಂಬ ಮಾತಿನಲ್ಲಿ ಹೇಗೆ ಸನ್ನಿಹಿತ ಮೃತ್ಯುವಿನ ಮುನ್ನರಿವು ಮನಸಸ್ಸನ್ನು ಕಲಕುವುದೋ ಹಾಗೆಯೇ ಈ ಭಯಂಕರವಾದ ಅರಿವನ್ನೂ ಕವನವಾಗಿ ಅರಗಿಸುತ್ತಿರುವ ಕವಿಯ ಬಗ್ಗೆ ಗೌರವವೂ ಹುಟ್ಟುತ್ತದೆ.

'ರೋಗಾಣುಗಳು' ಎಂಬ ಅಷ್ಟು ಸಫಲವಲ್ಲದ ಕವನದಲ್ಲೂ ಇದೇ ರೀತಿ ಕಂಡುಬರುತ್ತದೆ. ಮೈಕ್ರೋಸ್ಕೋಪಿನ ಮೂಲಕ ಕಾಣುವ ಅಸಂಖ್ಯ ರೋಗಾಣುಗಳ ಹುಚ್ಚುಹಿಡಿಸಬಲ್ಲ ನೋಟವನ್ನೂ, ತಿಳಿವಿನ ಸೂಕ್ಷ್ಮದರ್ಶಕದ ಮೂಲಕ ಮನುಷ್ಯನ ಹೃದಯದಲ್ಲಿ ಕಾಣಬಹುದಾದ ಸಮಾಜಘಾತಕ ರೋಗಾಣುಗಳನ್ನೂ ಸಂಗತಗೊಳಿಸುವ ಈ ಸರಳಪದ್ಯದಲ್ಲಿ ಆಡುಮಾತಿನ ಸೊಗಸು ಗಮನಾರ್ಹವಾಗಿದೆ:

ಎಲ್ಲಿ? ಎಲ್ಲಿ?- ಉಹುಂ, ಅವು
ಹಾಗೆ ಹೀಗೆ ಕಾಣಸಿಗವು;
ಮಾಯುಕದ ಬೀಜಗಳು;
ರಸ್ತೆ, ಮನೆ, ಗದ್ದೆ, ತೋಟ,
ಕೆರೆ, ಚರಂಡಿ- ಎಲ್ಲ ಎಲ್ಲ
ಇದ್ದಂತೇ ಇವೆಯಲ್ಲ!
ಆದರೆ,
ಕನ್ನಡಿಯ ತುಂಡೊಂದನು ತೆಗೆದುಕೊ;
ಅದರಲಿಷ್ಟು ಮಣ್ಣೊ ನೀರೊ ಸುರಿದುಕೊ;
ಒಂದು ಕಣ್ಣ ಮುಚ್ಚು,
ಇನ್ನೊಂದನು ಈ ಯಂತ್ರದ- ಮೈಕ್ರೋಸ್ಕೋಪ್-
ಬಾಯಿಗಿಡು—

ಈ ಕವನಗಳಲ್ಲೆಲ್ಲ ಅತ್ಯಂತ ಗಮನಾರ್ಹವಾದುದು 'ಕಲ್ಪನೆ' ಎಂಬ ಕವನ. ಇಲ್ಲಿ ಮೊತ್ತಮೊದಲನೆಯ ಬಾರಿಗೆ ಕವಿ ಸಂಕೇತಗಳ ಸಫಲ ಪ್ರಯೋಗವೊಂದನ್ನು ನಡಸಿದ್ದಾರೆ. ಈ ಚಿಕ್ಕ ಕವನದಲ್ಲಿ ಅನುಭವ ಸಂಕೇತ

ವಾಗಿ ಅವತರಿಸಿ ರಸವಾಗುವುದು ಕಂಡುಬರುತ್ತದೆ. ಭೂತದ ಮನೆ, ಕಾಳ ಬೆಕ್ಕು, ಜೇಡನ ಬಲೆ, ಬಿರುಗಾಳಿ, ಮಿಂಚು, ಸಿಡಿಲು– ಇವುಗಳ ಪ್ರತಿಮೆಯಲ್ಲಿ ಕವಿಯ ಕಲ್ಪನೆ ಕಂಡ ರುದ್ರಸತ್ಯವೊಂದು ಮನಮುಟ್ಟುವಂತೆ ಧ್ವನಿತವಾಗುತ್ತದೆ. ಈ ಕವನದ ನಡಗೆಯೂ ಕೂಡಾ ಸ್ವತಂತ್ರ ವೈವಿಧ್ಯವುಳ್ಳದ್ದಾಗಿ ಆಡುಮಾತಿನ ನೆಲಗಂಪಿನಿಂದ ಸತ್ವಪೂರ್ಣವಾಗಿದೆ:

ಕಲ್ಪನೆ
ಇದು ಭೂತದ ಮನೆ,
ಮುರುಕು ಛಾವಣಿ ಕೆಳಗೆ ಮುಸಿಹಿಡಿದ ಹಲಗೆ;
ನಡುವೆ ನೇತಾಡುತಿಹ ಜೇಡನ ಬಲೆ,
ಕವಿದೃಷ್ಟಿ ಕನಸಿನಲಿ ಏನೊ ಹುಡುಕಾಡುತಿದೆ:
ಅದೊ ಅಲ್ಲಿ ಕಣ್ಮುಚ್ಚಿ ನಿಂತಿಹುದು
ಕಾಳಬೆಕ್ಕು!
ತಲೆಯ ಮೋಗಡೆ ದೀಪ
ಯಾರು ಹಚ್ಚಿಟ್ಟರೋ ಇದನೆಂದು
ಗಾಳಿ ಬೇಸರದುಸುರ ಸೂಸುತಿಹುದು.
ಎಲ್ಲೊ ದೂರದಿ ಗುಡುಗು ನರಳುತಿಹುದು,
ಅಬ್ಬಬ್ಬ! ಭಯದ ಬಿರುಗಾಳಿ ಛೀಳಿಡುವ ಸದ್ದು.
ಈ ಚಪಲ ಬೆಕ್ಕು-
ಎಂತು ನಂಬುವುದಿದನು?
ಅದೊ ಅದೋ!
ಪಾದದಡಿಯಿಂದ ನೆತ್ತಿಯ ತನಕ ಸೆಳೆದಾಡಿ
ಝುಗಝುಗನೆ ಹರಿಯಿತದೊ ಕೋಲ್ಮಿಂಚು-
ಖಡಖಡಲ್ ಖಡಖಡಲ್ . . . . .
ಬೆಚ್ಚಿ ಚೀರಿಟ್ಟು ಕಣ್ಬಿಟ್ಟ ಕವಿ:
ಅದೇ ಮುರುಕು ಛಾವಣಿ,
ಕೆಳಗೆ ಮುಸಿಹಿಡಿದ ಹಲಗೆ,
ನಡುವೆ ತೂಗಾಡುತಿಹ ಜೇಡನ ಬಲೆ.
ಹಲ್ಲಿ ಬೇಟೆಗೆ ಹೊರಟ ಹೆಗ್ಗಣದ ಮರಿಯೊಂದು
ಮಾಡಿನೆಡೆಯಲಿ ಸ್ತಬ್ಧವಾಗಿ ನಿಂತು
ಮಾಡಿದ ಅಕೃತ್ಯದ ಅರಿವಿಲ್ಲದೇ
ಕೆಳಗೆ ಪಿಳಿ ಪಿಳಿಯೆಂದು ನೋಡುತ್ತಿದೆ.

ವಾಸ್ತವದ ಮಧ್ಯದಲ್ಲೇ ವಾಸ್ತವದ ಹೊಟ್ಟೆಯಲ್ಲೇ ಅಜ್ಞಾತಭಯವೊಂದು ಇಲ್ಲಿ ಸಾಕಾರವಾಗಿ ಕವಿಯ ಅನುಭವಕ್ಕೆ ಸಮರ್ಪಕವಾದ ದೇಹ ರೂಪ ಗೊಂಡಿದೆ. ಈ ಪದ್ಯದಲ್ಲಿ ಇರುವ ಧ್ವನಿವಿಪುಲತೆ ಉತ್ತಮ ಕವನದ ಲಕ್ಷಣ. ಕಾಳಬೆಕ್ಕು- ಈ 'ಚಪಲ'ವೂ ಸಂಬಲರ್ಹವಲ್ಲದ್ದೂ ಆದ ಈ ಕಾಳಬೆಕ್ಕು ಎಂಥದು? ಇದು ಏನು? ಕಾಲನ್ನೋ, ಸಾವೋ, ಭಯದ ಮೂಲವಿಗ್ರಹವೋ? ಅಥವಾ ಈ ಎಲ್ಲವೂ ಹೌದೊ? ಇದು ಇಂಥದೇ ಎಂದು ಬೆರಳಿಟ್ಟು ತೋರಿ ಸಲು ಸಾಧ್ಯವಲ್ಲವಾದರೂ ಅದು ನಮ್ಮ ಮನಸ್ಸಿನಲ್ಲಿ ಹುಟ್ಟಿಸುವ ಅರ್ಥ ಭಾವಗಳ ತರಂಗಗಳು ಕವಿಯ ಸಂಕೀರ್ಣಾನುಭವದ ಬಹುಮುಖಗಳ ಪ್ರತಿರೂಪವಾಗುತ್ತವೆ. ಇಲ್ಲಿ ಸಂಗ್ರಹವಾಗಿ ಹೇಳುವ ಕಲೆ ಇದೆ; ಭಾಷೆ ಯಲ್ಲಿ ಆತ್ಮೀಯತೆಯ ನಿರಾಡಂಬರದ ಮೋಹಕತೆ ಇದೆ; ಶುದ್ಧ ಅಭಿರುಚಿಯ ಸ್ಪಷ್ಟ ಆವಿಷ್ಕಾರವಿದೆ. ಇದು ಇತ್ತೀಚೆಗೆ ಬಂದ ಕವನಗಳಲ್ಲಿ ಉತ್ತಮವಾ ದವುಗಳಲ್ಲೊಂದು- ಖಂಡಿತವಾಗಿ. ಈ ಕವನದ ಹಿರಿಮೆ ಇರುವುದು ಕವಿ ತನ್ನ ಮನಸ್ಸಿನಲ್ಲಿ ಹಠಾತ್ತನೆ ಉದ್ಭವಿಸಿದ ಅಜ್ಞಾತ ಭಯವೊಂದನ್ನು 'ಮುರುಕು ಭಾವಣಿ', 'ಜೇಡನ ಬಲೆ', 'ತಲೆಯ ಮೇಗಡೆ ದೀಪ', 'ಮಸಿ ಹಿಡಿದ ಹಲಗೆ', ಹಲ್ಲಿಬೇಟೆಗೆ ಹೊರಟ ಹೆಗ್ಗಣದ ಮರಿ'- ಈ ವಾಸ್ತವ ಜಗತ್ತಿನ ವಸ್ತುಗಳಲ್ಲಿ ಸಾಂಗತ್ಯಗೊಳಿಸಿದ್ದರಿಂದ ಮತ್ತು ಆ ಭಯವನ್ನೇ 'ಕಾಳಬೆಕ್ಕು', ಶೀಳಿಡುವ ಬಿರುಗಾಳಿ, ಕೋಲ್ಮಿಂಚು ಸಿಡಿಲುಗಳ ಪ್ರತಿಮೆಗ ಳಲ್ಲಿ ಸಾಕ್ಷಾತ್ಕಾರಗೊಳಿಸಿದ್ದರಿಂದ. ಈ ಕವಿತೆಯನ್ನು ಕವಿ ಬರೆದ ತಾರೀಕೂ ಗಮನಾರ್ಹವಾದುದು: ೧೬-೧೦-೫೩. ಕನ್ನಡನಾಡಿನ ಒಂದು ಮೂಲೆ ಯಲ್ಲಿ ಇದ್ದವನಾದರೂ ಕವಿ ಆಗ ಕನ್ನಡ ಕಾವ್ಯಪ್ರಪಂಚದಲ್ಲಿ ಕಂಡುಬರ ತೊಡಗಿದ್ದ ಹೊಸ ಪ್ರಭಾವಗಳನ್ನು ಹೇಗೆ ಹೀರಿಕೊಳ್ಳುತ್ತಿದ್ದ, ತನ್ನ ಪಾಡಿಗೆ ತಾನು ಹೇಗೆ ಅದನ್ನು ತನ್ನದಾಗಿ ಮಾಡಿಕೊಳ್ಳುತ್ತಿದ್ದ, ಹೇಗೆ ಬೆಳೆಯುತ್ತಿದ್ದ ಎಂಬ ಸಂಗತಿ ಕವಿಯ ಪ್ರತಿಭೆಯ ಮಹತ್ವವನ್ನು ಹೇಗೋ ಹಾಗೆಯೇ ಒಂದು ಕಾಲದಲ್ಲಿ ಬರೆಯುತ್ತಿರುವ ನಿಜವಾದ ಎಲ್ಲ ಕವಿಗಳಿಗೂ ಸಾಮಾನ್ಯ ವಾದೊಂದು ಗುಣ ಇದ್ದೇ ಇರುತ್ತದೆ ಎಂಬ ಮಾತನ್ನು ರುಜುವಾತುಪಡಿಸು ತ್ತದೆ.

ಈ ಕಾಲದಲ್ಲಿ ಕವಿಯ ಮನಸ್ಸಿನ ಮೇಲೆ ಮೃತ್ಯು ತನ್ನ ಕರಿನೆಳಲನ್ನು

ಚೆಲ್ಲಿತ್ತು ಎಂಬುದನ್ನು ನೆನಪಿಟ್ಟುಕೊಂಡರೆ ಆತನ ಮನಸ್ಸು ಮತ್ತೆ ಮತ್ತೆ ಸಾವಿನ ಚಿಂತನೆಯಲ್ಲಿ ತಲ್ಲೀನವಾಗುತ್ತಿದ್ದುದು ಆಶ್ಚರ್ಯವೆನ್ನಿಸದು. "ರೋಗಿಯ ಚಿಂತೆ" (೧೬-೧೦-೫೩) ಎಂಬ ಕವನದಲ್ಲಿ ಕವಿ ತನ್ನ ಸಾವನ್ನು ಇನ್ನೊಬ್ಬನ ಸಾವಾಗಿ ಕಂಡು ಮೃತ್ಯುವಿನ ನೂತನ ಜಗತ್ತನ್ನು ಅನ್ವೇಷಿಸುತ್ತಿರುವುದು ಕಂಡುಬರುತ್ತದೆ. ಮೃತ್ಯುಭಯದಂಥ ಭಯದಲ್ಲೂ ಕೂಡಾ ಕವಿ ಭಾವಾತಿರೇಕದ ರೋಗಕ್ಕೆ ತುತ್ತಾಗದೆ ಕವಿಗೆ ಅತ್ಯಗತ್ಯವಾಗಿ ಬೇಕಾಗಿರುವ ಅನಾಸಕ್ತಿಯ ಸಾಕ್ಷಿಭಾವವನ್ನು ಉಳಿಸಿಕೊಳ್ಳುತ್ತಿರುವುದು ಆತನ ಪ್ರತಿಭೆಯ ನಿಜವಾದ ಹೆಗ್ಗುರುತು. ಇದೂ ಅಲ್ಲದೆ ಈ ಕಾಲದಲ್ಲಿ ಕವಿಯ ಮನಸ್ಸು ಹೊಸರೀತಿಯಲ್ಲೇ ಕೆಲಸಮಾಡುತ್ತಿದ್ದರೂ ಆತ ತನಗೆ ಆ ವಯಸ್ಸಿಗೆ ಸಹಜವಾದ ಸರಳತೆಯನ್ನು ಬಿಡಲಿಲ್ಲ ಎಂಬುದು ಆತನ ಭಾವಪ್ರಾಮಾಣಿಕತೆಗೆ ಪ್ರಬಲವಾದ ಸಾಕ್ಷಿ. ಸಂಕೀರ್ಣವಾದ ಅಭಿವ್ಯಕ್ತಿ ಸಂಕೀರ್ಣವಾದ ಅನುಭವಕ್ಕೆ ಮಾತ್ರ ಸಲ್ಲುವಂಥದು. ಹಾಗಲ್ಲದೆ ಸರಳಾನುಭವಕ್ಕೆ ಸಂಕೀರ್ಣದ ಉಡುಗೆ ತೊಡಿಸಿದರೆ ಕಾವ್ಯ ಕೆಡುತ್ತದೆ. 'ನಾಳೆ ಎಂತೋ ಏನೊ' ಎಂದು ಮೊದಲಾಗುವ ಈ ಕವನದ ಭಾವ ವೈಯಕ್ತಿಕವೇ ಆದರೂ ಭಾವವನ್ನು ಹತೋಟಿಗೊಳಿಸುವ ರೀತಿಯಿಂದಾಗಿ ಕವನಕ್ಕೆ ಸಾರ್ವತ್ರಿಕದ ಘನತೆ ಬರುತ್ತದೆ. 'ಜಾಗೃತಿ' ಎಂಬ ಕವನದಲ್ಲಿ (೨-೧-೧೯೫೪) ಮತ್ತೆ ಈ ಮೃತ್ಯುಚಿಂತನ ಮೈಗೊಳ್ಳುತ್ತದೆ. ಕವನದ ಮೊದಲಭಾಗದಲ್ಲಿ ಸಾವಿನ ಭೀಕರಚಿತ್ರ ಕ್ರಮಕ್ರಮವಾಗಿ ಮೂಡುತ್ತ ಬಂದು

> ಸಾವು ಹೊರಗೆ ಕಟಕಟನೆ ಬಾಗಿಲನು ಬಡಿಯುತಿದೆ,
> ಹೃದಯದ ಗಡಿಯಾರವಿಲ್ಲಿ ಅಕಟಕಟ ಎನ್ನುತಿದೆ;
> ಕತ್ತುಮುರಿದ ಕೋಳಿ ಕಾಲು ರಪರಪನೆ ಬಡಿಯುತಿದೆ-

ಎಂಬ ಸಾಲುಗಳಲ್ಲಿ, ಅದೂ ಕೊನೆಯ ಸಾಲಿನಲ್ಲಿ, ಸಂಪೂರ್ಣ ಪ್ರತೀಕಗೊಳ್ಳುತ್ತದೆ. ಆದರೆ ಕವನದ ಎರಡನೆಯ ಭಾಗದಲ್ಲಿ ಭಯ ಕೇವಲ ಕನಸು ಎಂಬ ಪ್ರತ್ಯಯ ಗಡಿಯಾರದ ಅಲಾರಂಧ್ವನಿಯ ಮೂಲಕ ಮೂಡಿಬರುತ್ತದೆ. ಜೀವದ ಆಶೆ ವಾಸ್ತವದ ವಿಜಯ ಪತಾಕೆಯಾಗಿ ಕನಸನ್ನು ಮೆಟ್ಟಿನಿಲ್ಲುತ್ತದೆ:

> ಕನಸನಳಿಸಿ ಮುಂಜಾನೆಯು ಬೆಳಕತಂದೆ ಭೋ ಪರಾಕ್!
> ಬೆಳ್ಳಿ ಕರಡಿಗೆಯುಲಿ ಬಿಳಿಯ ಬತ್ತಿ ಇದೆ- ಹಾರಿಸು ಹೊಗೆ-
> ಕಿಟಿಕಿ ಬಾಗಿಲುಗಳನೆಲ್ಲ ಒಡೆದು ಕೆಡೆದು ಜಗೆಹೊರಗೆ-

ಇದೋ ನೆಲ, ಅದೋ ಜಲ,
ಬೀಸುತಿದೆ ಮಂದಾನಿಲ;
ಹಾರು, ಕುಣಿ, ಹಾಕು ಕೇಕೆ!

ಈ ಸಾಲುಗಳಲ್ಲಿ ಇರುವುದು ಮುಂಜಾನೆಯ ಚಿತ್ರ ಹೇಗೋ ಹಾಗೆಯೇ ಇನ್ನೊಂದು ಹೊಸಬಗೆಯ, ಬಾಳಿನಾಚೆಯ ಮುಂಜಾನೆಯ ಚಿತ್ರವೂ ಹೌದು. ಕಿಟಿಕಿ ಕದಗಳು ಹೇಗೆ ಬಂಧನಕಾರಿಗಳೋ ಹಾಗೆಯೇ ಈ ದೇಹವೂ ಹೌದು. ಸಾವಿನ ಭೀಕರತೆಯನ್ನು ಅರಿತೂ ಅದರಾಚೆಯ ಇನ್ನೊಂದು ಬಗೆಯ ಜೀವನವನ್ನು ಧ್ಯಾನಿಸಬಲ್ಲ ಕವಿಯ ಈ ಆಶಾವಾದ ನಿರಾಶೆಬಿಟ್ಟ ಹೂವಿನಂತೆ ಹೃದ್ಯವಾಗಿದೆ.

ಯರ್ಮುಂಜ ರಾಮಚಂದ್ರ ಬರೆದಿಟ್ಟಿರುವ ಕವನಗಳಲ್ಲಿ ಕೊನೆಯದು "ಯಾರಿಲ್ಲಿಗೆ ಬಂದರು ಕಳೆದಿರುಳು?" (೧೪-೩-'೫೪). ಈ ಕವನಕ್ಕೆ ವಿಶೇಷವಾದೊಂದು ಮಹತ್ವವಿದೆ. ಇಲ್ಲಿ ಅಪೂರ್ವ ತೀವ್ರತೆಯುಳ್ಳ ಒಂದು ಅನುಭವ ಹೃದಯಂಗಮವಾಗಿ ಮೈತಳೆದಿದೆ. ಈ ಕವನದಲ್ಲಿ ಶೋಕಚರಿತ ಉಲ್ಲಾಸ– ತಿಳಿನೀಲಿಬಾನಿನಲ್ಲಿ ತೇಲುವ ಗರಿಯ ಹಗುರಿನ ಮೇಲೆ ಸೂರ್ಯಕಿರಣಗಳ ತೀಕ್ಷ್ಣವೇದನೆ–; ಸರಸಸರಳತೆಯಲ್ಲೇ ವ್ಯಕ್ತವಾಗುವೊಂದು ನಿಗೂಢತೆಯ ವಾತಾವರಣ; ಸಂಕೀರ್ಣಾನುಭವದ ಧ್ವನಿವೈಶಾಲ್ಯ– ಇವು ಕಾಣುತ್ತವೆ. 'ಯಾಕಣಕಿಪೆ ಈ ತೆರ?' ಎಂಬ ಕವನದಲ್ಲಿ ವ್ಯಕ್ತವಾಗಿದ್ದ ಕಾವ್ಯಸಹಜವಾದ, ಆದರೆ ಅಸಾಧಾರಣವಾದ ನಾದಮಾಧುರ್ಯ ಇಲ್ಲಿ ಸಫಲತೆಯನ್ನು ಮುಟ್ಟುತ್ತದೆ:

ಯಾರಿಲ್ಲಿಗೆ ಬಂದರು ಕಳೆದಿರುಳು
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

ಎಂಬ ಈ ಮೊದಲ ಸಾಲುಗಳು ಅಪೂರ್ವವಾದ ಮಧುರಯಾತನೆಯೊಂದಕ್ಕೆ ಮನಸನ್ನು ಒಡ್ಡುತ್ತವೆ. 'ಯಾರಿಲ್ಲಿಗೆ ಬಂದರು ಕಳೆದಿರುಳು' ಎಂಬ ಚರಣದಲ್ಲಿ ವಿಷಾದದ ಮಂಜಿನ ತೆಳ್ಳನೆಯ ಪರದೆಯನ್ನು ಭೇದಿಸಿಕೊಂಡು ನಿಗೂಢಯಾತನೆಯ ಸೂರ್ಯಕಿರಣ ತೂರಿಬರುವ ಚಂದದ ಲಲಿತಛಂದ ಇದೆ. 'ಈ ಕಥೆಯನೊರೆದು ಮುಂದಕೆ ತೆರಳು' ಎಂಬಲ್ಲಿ ಗಡಸುದನಿಯೊಡನೆ

ಬೆರೆತ ಒಂದು ಸೌಕುಮಾರ್ಯ ಮನಸ್ಸನ್ನು ತಟ್ಟುತ್ತದೆ. ಕವನವನ್ನು ಸಂಪೂರ್ಣವಾಗಿ ಓದಿದಾಗ ಇಲ್ಲಿ ಬಳಸಲಾಗಿರುವ 'ಕತೆ' ಎಂಬ ಶಬ್ದದ ಸಾರ್ಥಕ್ಯ ತಿಳಿಯುತ್ತದೆ. ಕಳೆದಿರುಳೇ ಆದ ಅನುಭವವಾದರೂ ಅದು ಈಗ ಯಾವುದೋ ಕಾಲದಲ್ಲಿ ಯಾವುದೋ ದೇಶದಲ್ಲಿ ನಡೆದಂತೆ ಭಾಸವಾಗಿ ಕೇವಲ 'ಕತೆ'ಯಂತೆ ತೋರುತ್ತದೆ. ಆದರೆ ಈ 'ಕತೆ'ಯು ವಿದೂರತೆಯಲ್ಲೂ ಒಂದು ಆತ್ಮೀಯತೆಯ ಸಾಮೀಪ್ಯ ಬೆರೆತಿದೆ. ಆದ್ದರಿಂದಲೇ 'ಆ ಕತೆಯನೊರೆದು ಮುಂದಕೆ ತೆರಳು' ಎಂಬ ಹಟದ ಆದರೂ ಸಲ್ಲಾಪದ ಮಾತು. ಈ ಪ್ರಕಾರ ಣವೇ ಕವಿಯ ಅನುಭವವೇ ಆದ ಈ ಕತೆ 'ಏನೂ ಅರಿಯದ ಮುಗ್ಧೆ'ಯ ಅನುಭವವಾಗಿ ಇಲ್ಲಿ ಚಿತ್ರಿತವಾಗಿದೆ. ಕವಿಯ ಸ್ವಂತ ಅನುಭವವಾದರೂ ಕಾವ್ಯದಲ್ಲಿ ಹೇಗೆ ವಸ್ತುಗಳಲ್ಲೇ ಚಿತ್ರಿತವಾಗಿ ತನ್ನ ಕೇಂದ್ರವನ್ನು ಹೊರ ಜಗತ್ತಿನ ಕೇಂದ್ರವಾಗಿ ಮಾರ್ಪಡಿಸುತ್ತದೆ ಎಂಬುದಕ್ಕೆ ಈ ಕವನ ಉತ್ತಮ ಉದಾಹರಣೆ. ಈ ಕವನ ಸುಕುಮಾರ ಮತ್ತು ಆವಿದ್ಧಗಳ ಮಧುರಪಾಕವಾಗಿರುವುದರಿಂದ ಇಲ್ಲಿನ ಸಂಕೀರ್ಣಾನುಭವ ಗದ್ಯಾನುವಾದದ ಚೌಕಟ್ಟಿಗೆ ಸಿಕ್ಕತಕ್ಕುದಲ್ಲ. ಅನುಭವದ ಬಹುಮುಖಗಳು ಇಲ್ಲಿ ಸಮರಸವಾಗಿ ಚಿತ್ರಿತವಾಗಿರುವುದರಿಂದ ಈ ಅನುಭವ ಇಂಥದೇ ಎಂದು ನಿರ್ದಿಷ್ಟವಾಗಿ ಹೇಳಲು ಬರುವಂತಿಲ್ಲ. ಇದಕ್ಕೆ ಕಾರಣ ಕವಿಶೈಲಿಯ ಅಸ್ಪಷ್ಟತೆಯಲ್ಲ; ಅನುಭವದ ಸಿರಿವಂತಿಕೆಯೇ. ಇಲ್ಲಿ ಬಂದವರು ಯಾರು? ಪ್ರೇಯಸಿಯ ಬಳಿಗೆ ಪ್ರಿಯನೇ? ಜೀವಾತ್ಮದ ಬಳಿಗೆ ಪರಮಾತ್ಮನೆ? ಸಾಂತದ ಕಿವಿಯಲ್ಲಿ ಅನಂತ ಪಿಸುನುಡಿದು ಹೋಯಿತೆ? ಅಥವಾ ಸಾವೇ ಹೀಗೆ ಹಠಾತ್ತನೆ ಬಂದು ಮೈ ಸೋಂಕಿಸಿ ಅದೃಶ್ಯವಾಯಿತೆ? ಈ ಎಲ್ಲ ಅರ್ಥಗಳೂ ಇಲ್ಲಿ ಸಲ್ಲುತ್ತವೆ. ಒಂದು ಅರ್ಥ ಇನ್ನೊಂದನ್ನು ಪೋಷಿಸುತ್ತದೆ. ಇಲ್ಲಿನ ಅನುಭವ ಮಧುರ ಹೇಗೋ ಹಾಗೆ ಕಟು; ಸುಕುಮಾರ ಹೇಗೋ ಹಾಗೆ ಭೀಕರ. ಇದು ಮಧುರವಾದ ಯಾತನೆ: ಇದು ನಸುಕಿನ ಬೆಳಕಿನಲ್ಲೂ ಬಳಲಿಕೆ ತರುತ್ತದೆ. ಮೈ ಗಡಗುಟ್ಟುವಂತೆ ಮಾಡುತ್ತದೆ. ಈ ಅನುಭವದ ಫಲವಾಗಿ ಮುಖ ತೊಯ್ದಿದೆ; ಕಣ್ಣೀರಿನ ಹೊಳೆ ಹರಿದಿದೆ. ಆದರೂ

ಯಾರೂ ಕಾಣದ ಆ ಮರೆಯೊಳಗೆ
ಕುಲುಕುಲು ಎನುತಿದೆ ಮೆಲುನಗೆಯ ನೊರೆ.

ನಿನ್ನೆಯ ಹಾಡಿನ ದನಿ ಇನ್ನೂ ಗುಣು-
ಗುಣಿಸುವ ಮಾಯೆಯಿದೆಂಥದು ಹೇಳು,
ಏ ಗಾಳಿ,
ಆ ಕಥೆಯನೊರೆದು ಮುಂದಕೆ ತೆರಳು.

ಇದೊಂದು ಉತ್ತಮ ಕವಿತೆಯೆಂಬುದರಲ್ಲಿ ಸಂದೇಹವಿಲ್ಲ. ಸ್ವಲ್ಪದರಲ್ಲಿ ಬಹಳ ಅರ್ಥವನ್ನು ಧ್ವನಿಸುವುದು; ಸಂಕೀರ್ಣಾನುಭವವನ್ನು ತಕ್ಕ ಪ್ರೌಢ ರೀತಿಯಲ್ಲಿ ವ್ಯಕ್ತಪಡಿಸುವುದು; ಓದಿದೊಡನೇ ಮನಸ್ಸಿಗೆ ಮೋಡಿಚೆಲ್ಲುವ ಅಪೂರ್ವ ನಾದಸಂಪತ್ತು- ಇವು ಈ ಕವನದ, ರಾಮಚಂದ್ರರ ಎಲ್ಲ ಉತ್ತಮ ಕವನಗಳ, ಲಕ್ಷಣಗಳು.

೪

ಇಂಥ ಉತ್ತಮ ಕವನಗಳನ್ನು ತನ್ನ ೨೦-೨೨ ವರ್ಷಗಳಲ್ಲಿ ಬರೆದ, ಬರೆಯಬಲ್ಲ ಕವಿಗಳು ಹೆಚ್ಚುಮಂದಿ ಇಲ್ಲ. ಬದುಕಿದ್ದರೆ ಇನ್ನೂ ಉತ್ತಮ ವಾದ ಕೃತಿಗಳನ್ನು ರಚಿಸಿ ಕನ್ನಡನಾಡಿನ ಪ್ರಮುಖಕವಿಯಾಗಿ ಪರಿಣಾಮ ಗೊಳ್ಳುತ್ತಿದ್ದ ಯಮ್ಮುಂಜ ರಾಮಚಂದ್ರ ಈಗ ಇಲ್ಲ. ಆದರೆ ಆತನ ಪ್ರತಿನಿಧಿಗಳಾದ ಈ ಕವನಗಳು ಇಲ್ಲಿ ಇವೆ. ಹೊಸಗನ್ನಡದ ಕಾವ್ಯಪರಂಪರೆಗೆ ಯಮ್ಮುಂಜ ರಾಮಚಂದ್ರರ ತರುಣ ಜೀವದ ಸತ್ವ ಬೆರೆತಿದೆ. ಅದಕ್ಕೆ ಮರಣವಿಲ್ಲ.

ಯಮ್ಮುಂಜ ರಾಮಚಂದ್ರ ನನ್ನಲ್ಲಿಟ್ಟಿದ್ದ ಪ್ರೀತ್ಯಾದರಗಳ ಕಾಣಿಕೆಯಾಗಿ ಈ ಲೇಖನಗಳನ್ನು ಬರೆಯಲು ಅವಕಾಶ ಕಲ್ಪಿಸಿಕೊಟ್ಟ ಕವಿಯ ಸಹೋದರರಿಗೆ ನಾನು ತುಂಬ ಕೃತಜ್ಞ. ರಾಮಚಂದ್ರರ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಕನ್ನಡನಾಡಿನ ಎಲ್ಲ ಕಾವ್ಯಪ್ರಿಯ ಸ್ನೇಹಿತರ ಪರವಾಗಿ ನಾನು ಹೃತ್ಪೂರ್ವಕವಾಗಿ ಹಾರಯಿಸುತ್ತೇನೆ.

ನರಸಿಂಹರಾಜ ಮೊಹಲ್ಲಾ,
ಮೈಸೂರು,
೧೬—೩—೧೯೫೬.

—ಗೋಪಾಲಕೃಷ್ಣ ಅಡಿಗ.

ಮೊದಲ ಚರಣಗಳು

ಪುರುಷರಿಗೆ ಮಾತ್ರ